# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 247 Issue: 247 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 06.04.2025 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2







# ನೂತನ ಜೋಡಿ ರಥಗಳಲ್ಲಿ ಶಿವತಾಂಡವ ನೃತ್ಯ

# ರಾಮನ ದಶಾವತಾರ ಹನುಮನ ಸಾಹಸ ಕೆತ್ತನೆ

## ನೋಡಬನ್ನಿ ಮರಿಯಮ್ಮನಹಳ್ಳಿಯ ಶ್ರೀಲಕ್ಷ್ಮೀನಾರಾಯಣಸ್ವಾಮಿ, ಶ್ರೀಆಂಜನೇಯಸ್ವಾಮಿಗಳ ಜೋಡು ರಥೋತ್ಸವ

■ ಜಿ.ವಿ.ಸುಬ್ಬರಾವ್

**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ನಾರಾಯಣ ದೇವರಕೆರೆಯು ಒಂದು ಸ್ವತಃ ಲಕ್ಷ್ಮೀನಾರಾಯಣ ಸ್ವಾಮಿಯೇ ಅವತರಿಸಿದ ದೇವಲೋಕ. ಅಂತಹ ಊರಲ್ಲಿ ಶ್ರೀಲಕ್ಷ್ಮೀನಾರಾಯಣಸ್ವಾಮಿ, ಶ್ರೀಆಂಜನೇಯ ಸ್ವಾಮಿಗಳ ಜೋಡು ರಥೋತ್ಸವ ಐತಿಹಾಸಿಕ. ಪ್ರತಿವರ್ಷ ಶ್ರೀರಾಮನವಮಿಗೆ ನಡೆಯುವ ಜೋಡು ರಥೋತ್ಸವಕ್ಕೆ ಸಾವಿರಾರು ವರ್ಷಗಳ ಐತಿಹ್ಯವಿದೆ. ಅಂದು ಹರಪನಹಳ್ಳಿ ಪಾಳೆಗಾರ ಸೋಮಶೇಖರನಾಯಕರ ರಾಜಮಾತೆ ಸೋಮಮ್ಮಾಜಿಯು ಹಂಪಿ, ನಾಣಿಕೇರಿಯ ಉಭಯ ಸ್ವಾಮಿಗಳಿಗೆ ರಥಗಳನ್ನು ನಿರ್ಮಿಸಿರುವ ಕುರಿತು ಇತಿಹಾಸದಿಂದ ತಿಳಿಯುತ್ತದೆ.

**ಹೊಸತೇರುಗಳ ಕನಸು**: ಈ ವರ್ಷ ಶ್ರೀರಾಮನವಮಿ ಯಂದು ನಡೆಯುತ್ತಿರುವ ಜೋಡಿ ರಥೋತ್ಸವಕ್ಕೆ ನೂತನ ರಥಗಳು ನಿರ್ಮಾಣ ವಾಗಿದ್ದು, ಈ ತಲೆಮಾರಿನ ಜನರಿಗೆ ನೂತನ ಜೋಡಿ ರಥಗಳು ಅತ್ಯಂತ ಆಕರ್ಷಕವಾಗಿ ಮತ್ತು ದೈವಕಳೆಯನ್ನು ಹೊಂದಿರುವ ನೂತನ ಜೋಡಿ ರಥಗಳನ್ನು ಗಮನಿಸಿ ದಾಗ ಎಂಥವರಿಗೂ ಸೋಜಿಗವೆನಿಸಲಾರದು.

ಸುಮಾರು 600–700 ವರ್ಷಗಳ ಹಳೆಯ ರಥಗಳು ಶಿಥಿಲಾವ್ಯಸ್ಥೆಯಲ್ಲಿದ್ದವು. ನೂತನ ರಥಗಳನ್ನು ನಿರ್ಮಿಸುವ ಉದ್ದೇಶದಿಂದ ದೇವಸ್ಥಾನದ ಅಭಿವೃದ್ಧಿ ಸಮಿತಿಯು ರೂಪತಳೆದು ನೂತನ ರಥಗಳ ನಿರ್ಮಾಣಕ್ಕೆ ಮುಂದಾಗಿ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರನ್ನು ಸಂಪರ್ಕಿಸಿ ನೂತನ ರಥಗಳ ನಿರ್ಮಾಣಕ್ಕೆ ಮುಂದಾಗಿದ್ದರು.

**ದಾನಿಗಳು:** ಅದರಂತೆ ಸಮಿತಿಯವರು ಗಣಿ ಉದ್ಯಮಿಗಳಾದ ಶ್ಯಾಮ್‌ರಾಜ್ ಸಿಂಗ್ ಮತ್ತು ಜಯರಾಜ ಸಿಂಗ್ ಸೋದರರನ್ನು ಸಂಪರ್ಕಿಸಿ ನೂತನ ರಥಗಳ ನಿರ್ಮಾಣದ ಬಗ್ಗೆ ಪ್ರಸ್ತಾಪಿಸಿದಾಗ ಒಂದು ರಥ ಅಂದರೆ ಶ್ರೀ ಲಕ್ಷ್ಮೀನಾರಾಯಣಸ್ವಾಮಿ ರಥದ ನಿರ್ಮಿಸಿ ಕೊಡುವುದಾಗಿ ಶ್ಯಾಮರಾಜ್ ಸಿಂಗ್ ಸುಮಾರು 2 ಕೋಟಿರೂ. ಎಲ್ಲಾ ವೆಚ್ಚವನ್ನು ಭರಿಸಲು, ಜಯರಾಜ ಸಿಂಗ್ 50 ಲಕ್ಷರೂ. ಒಪ್ಪಿದರ ಪರಿಣಾಮ ವಾಗಿ ಹಾಗು ಜಗತ್ತಿನಾದ್ಯಂತ ಇರುವ ಉಭಯಸ್ವಾಮಿಗಳ ಭಕ್ತರು, ಎಲ್ಲಾ ಧರ್ಮದವರು, ಸಮಾಜದವರಿಂದ ಹರಿದು ಬಂದ ಲಕ್ಷಾಂತರ ರೂ.ಗಳ ಮಹಾಪೂರದ ದಾನದಿಂದ ಶ್ರೀ ಆಂಜನೇಯಸ್ವಾಮಿ ರಥವನ್ನು ದೇಣಿಗೆ ಮೂಲಕ ನಿರ್ಮಿಸಲಾಗಿದ್ದು, ಇಂದು ಎರಡು ಜೋಡಿ ರಥಗಳು ನಿರ್ಮಾಣವಾಗಿ ಭಕ್ತರು ಈ ಬಾರಿ ನೂತನ ಜೋಡಿ ರಥಗಳನ್ನು ಎಳೆಯಲಿದ್ದಾರೆ.

**ಕಟ್ಟಿಗೆ:** ಭವ್ಯವಾದ ನೂತನ ಜೋಡಿ ರಥಗಳ ನಿರ್ಮಾಣಕ್ಕೆ ತ್ಯಾಗ, ಹೊನ್ನಿ, ಶಿವನಿ, ಭೋಗಿ ತಳಿಯ ಮರದ ದಿನ್ನೆಗಳನ್ನು ಉಡುಪಿ, ದಾಂಡೇಲಿಯಿಂದ ತರಲಾಗಿತ್ತು. ನೂತನ ರಥಗಳು ಧ್ವಜ ಆಯದಲ್ಲಿ ನಿರ್ಮಿಸಲಾಗಿದೆ. ಅಂದಾಜು 2300 ಘನ ಅಡಿ ಹಾರ್ಡ್ ಉಡ್, 3 ಸಾವಿರ ಘನ ಅಡಿ ಟೀಕ್ ಕಟ್ಟಿಗೆ ಬಳಸಲಾಗಿದೆ, ಒಟ್ಟು ಅಂದಾಜು 5300ಘನ ಅಡಿಗಳಷ್ಟು ವಿವಿಧ ನಮೂನೆ ಸಾವಿರಾರು >>3







### ಹೈಟೆಕ್ ಜೋಡಿ ರಥಗಳ ವೈಶಿಷ್ಟ್ಯ

**ಅಂದಾಜು 600– 700 ವರ್ಷಗಳವರಗೆ ಈ ಜೋಡಿ ರಥಗಳು ಬಾಳಿಕೆ ಬರುವಂತೆ ರಥದ ಬುಡದಿಂದ ಮಂಟಪದವರೆಗೆ 5300 ಸಾವಿರ ಘನ ಅಡಿ ಕಟ್ಟಿಗೆಯನ್ನು ಬಳಸಲಾಗಿದೆ. ಇಡೀ ರಥಕ್ಕೆ ಕೋಚ್ ಸ್ಕ್ರು ಬಳಿಸದೇ ಯೂಸ್ ಸ್ಲಾಂಕ್ ಬಳಸಲಾಗಿದೆ. 8 ಅಡಿ ಎತ್ತರದ ಕಬ್ಬಿಣದ ಆ್ಯಂಗಲ್ ಅಳವಡಿಸಲಾಗಿದೆ. ಎರಡು ರಥಗಳಿಗೆ ಒಂದೂ ಮೊಳೆಬಳಸದೆ 2800 ಬೋಲ್ಟ್ ಗಳನ್ನು ರಥಕ್ಕೆ ಅಳವಡಿಸಿದ್ದು, ರಥಗಳ ಒಂದೊಂದು ಚಕ್ರಕ್ಕೂ 400 ಕೆಜಿ ಕಬ್ಬಿಣವನ್ನು ಬಳಸಲಾಗಿದೆ. ಒಂದು ರಥದ 6 ಚಕ್ರಕ್ಕೆ 2 ಟನ್ ಕಬ್ಬಿಣವನ್ನು ಭದ್ರತೆಯ ಹಿತದೃಷ್ಟಿಯಿಂದ ಬಳಸಲಾಗಿದೆ. ಸುಮಾರು ನೂರಾರು ವರ್ಷಗಳ ಕಾಲ ಅತ್ಯಂತ ವೈಭದಿಂದ ಮೆರದ ಜೋಡು ರಥಗಳು ಶಿಥಲಾವ್ಯವಸ್ಥೆ ಯಲ್ಲಿದ್ದ ಜೋಡಿ ರಥಗಳಿಗೆ ಈಗ ವಿಶ್ರಾಂತಿ ನೀಡಲಾಗಿದ್ದು, ಈ ವರ್ಷ ಹೈಟಕ್ ಸ್ಪರ್ಶದ ನೂತನ ಜೋಡಿ ರಥಗಳನ್ನು ಎಳೆಯಲು ಭಕ್ತರು ಉತ್ಸುಕರಾಗಿದ್ದಾರೆ.**







# ಸಾಮಾನ್ಯ ದರ್ಜೆ ಟಿಕೇಟ್‌ಗೆ ಸ್ಲೀಪರ್ ಕೋಚ್‌ನಲ್ಲಿ ಪ್ರಯಾಣ

## ಹಂಪಿ ಎಕ್ಸ್‌ಪ್ರೆಸ್ ಹೊಸಪೇಟೆ – ಹುಬ್ಬಳ್ಳಿ



■ **ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆಯಿಂದ ಹುಬ್ಬಳ್ಳಿವರೆಗೆ ಹಂಪಿ ಎಕ್ಸ್‌ಪ್ರೆಸ್ ರೈಲುಗಾಡಿಯಲ್ಲಿ ಸಾಮಾನ್ಯ ದರ್ಜೆ ಟಿಕೇಟ್ ಪಡೆದು ಸ್ಲೀಪರ್ ಕೋಚ್‌ನಲ್ಲಿ ಪ್ರಯಾಣಿಸಲು ರೈಲ್ವೆ ಇಲಾಖೆ ಅಧಿಕಾರಿಗಳು ಅನುಮತಿ ನೀಡಿದ್ದಾರೆ ಎಂದು ವಿಜಯನಗರ ರೈಲ್ವೇ ಅಭಿವೃದ್ಧಿ ಕ್ರಿಯಾ ಸಮಿತಿ ಅಧ್ಯಕ್ಷ ವೈ.ಯಮುನೇಶ, ಕಾರ್ಯದರ್ಶಿ ಮಹೇಶ್ ಕುಡುತಿನಿ ತಿಳಿಸಿದ್ದಾರೆ.

ಪ್ರತಿದಿನ ಬೆಳಿಗ್ಗೆ 7.00 ಗಂಟೆಗೆ ಹೊಸಪೇಟೆಯಿಂದ ನಿರ್ಗಮಿಸುವ ಮೈಸೂರು–ಹುಬ್ಬಳ್ಳಿ ಹಂಪಿ ಏಕ್ಸ್‌ಪ್ರೈಸ್ ಗಾಡಿ ಸಂಖ್ಯೆ : 16592ಯಲ್ಲಿ ಸಾಮಾನ್ಯ ದರ್ಜೆ ಟಿಕೆಟ್ ಪಡೆದು ಹೊಸಪೇಟೆಯಿದ ಹುಬ್ಬಳ್ಳಿಗೆ ಹೆಚ್ಚುವರಿ ಶುಲ್ಕ ನೀಡದೇ S8 ಮತ್ತು S9 ಸ್ಲೀಪರ್ ಕೋಚ್‌ನಲ್ಲಿ ಪ್ರಯಾಣಿಸುವ ಸೌಲಭ್ಯ ಕಲ್ಪಿಸಲಾಗಿದೆ. ಅದರಂತೆ ಹುಬ್ಬಳ್ಳಿಯಿಂದ ಪ್ರತಿದಿನ ಸಂಜೆ 6.30ಕ್ಕೆ ನಿರ್ಗಮಿಸುವ ಹುಬ್ಬಳ್ಳಿ–ಮೈಸೂರು ಹಂಪಿ ಎಕ್ಸ್‌ಪ್ರೇಸ್ ಗಾಡಿ ಸಂಖ್ಯೆ : 16591ರಲ್ಲಿ ಸಾಮಾನ್ಯ ದರ್ಜೆ ಟಿಕೆಟ್ ಪಡೆದು S5, S6 ಮತ್ತು S7 ಈ ಸ್ಲೀಪರ್ ಕೋಚ್‌ಗಳಲ್ಲಿ ಹೊಸಪೇಟೆವರೆಗೆ ಮಾತ್ರ ಪ್ರಯಾಣಿಸಬಹುದಾಗಿದೆ. ಅದರಂತೆ ಪ್ರತಿದಿನ ಮಧ್ಯಾಹ್ನ 1.00 ಗಂಟೆಗೆ ಹುಬ್ಬಳ್ಳಿಯಿಂದ ನಿರ್ಗಮಿಸುವ ಅಮರಾವತಿ ಎಕ್ಸ್‌ಪ್ರೇಸ್ ಗಾಡಿ ಸಂಖ್ಯೆ : 17226 ಗಾಡಿಯಲ್ಲಿ ಸಾಮಾನ್ಯ ದರ್ಜೆಯ ಟಿಕೆಟ್ ಪಡೆದು S8 ಮತ್ತು S9 ಸ್ಲೀಪರ್ ಕೋಚ್‌ಗಳಲ್ಲಿ ಬಳ್ಳಾರಿ ವರೆಗೆ ಪ್ರಯಾಣಿಸುವ ಸೌಲಭ್ಯ ಕಲ್ಪಿಸಲಾಗಿದೆ. ಆದರೆ ಇದೇ ರೈಲಿನಲ್ಲಿ ಬಳ್ಳಾರಿಯಿಂದ ಹುಬ್ಬಳ್ಳಿವರೆಗೆ ಈ ಸೌಲಭ್ಯ ಇಲ್ಲ. ಹೊಸಪೇಟೆಯಿಂದ ಹುಬ್ಬಳ್ಳಿಗೆ ಎಕ್ಸ್‌ಪ್ರೇಸ್ ರೈಲು ಧರ 65/– ರೂ ಪ್ಯಾಸಿಂಜರ್ ರೈಲು ಧರ 35/–ರೂ ಇದ್ದು ಬಸ್‌ಟಿಕೆಟ್ ಧರ 206/–ಇದೆ.

ಸಾಮಾನ್ಯ ದರ್ಜೆಯ ರೈಲು ಪ್ರಯಾಣಿಕರಿಗೆ ಹೆಚ್ಚುವರಿ ಸೌಲಭ್ಯವನ್ನು ಕಲ್ಪಿಸುವ ದೃಷ್ಟಿಯಿಂದ ಈ ವರ್ಗದವರಿಗೆ ಹೊಸಪೇಟೆಯಿಂದ ಹುಬ್ಬಳ್ಳಿವರೆಗೆ ಹೆಚ್ಚುವರಿ ಶುಲ್ಕ ನೀಡದೇ ಸ್ಲೀಪರ್ ದರ್ಜೆ ಕೋಚ್‌ಗಳಲ್ಲಿ ಪ್ರಯಾಣಿಸುವ ಅವಕಾಶ ಕಳೆದ ಮೂರು ವರ್ಷಗಳಿಂದ ಜಾರಿಯಲ್ಲಿತ್ತು.

ಈ ಆದೇಶ ಜಾರಿಯಲ್ಲಿದ್ದರೂ ಸಹ ಕಳೆದ ಒಂದು ವರ್ಷದಿಂದ ಸಾಮಾನ್ಯ ದರ್ಜೆಯ ಪ್ರಯಾಣಿಕರು ಈ ಸೌಲಭ್ಯ ಬಳಸಿಕೊಳ್ಳದಂತೆ ಆಕ್ಷೇಪಿಸಿ ಸ್ಲೀಪರ್ ಕೋಚ್‌ಗಳಲ್ಲಿ ಪ್ರಯಾಣಿಸುತ್ತಿದ್ದವರಿಗೆ ಕಿರುಕುಳ ನೀಡಿ ಟಿಕೆಟ್ ಪರಿವೀಕ್ಷಕರು ಹೆಚ್ಚುವರಿ ಶುಲ್ಕ (ಧಂಡ) ವಿಧಿಸುತ್ತಿದ್ದರು. ಟಿಕೆಟ್ ಪರಿವೀಕ್ಷಕರ (TC) ಈ ಕ್ರಮದ ವಿರುದ್ಧ ನೈರುತ್ಯ ರೈಲ್ವೇ ವಲಯ ಬಳಕೆದಾರರ ಸಲಹಾ ಸಮಿತಿಯ ಹಿರಿಯ ಸದಸ್ಯರಾದ ಬಾಬುಲಾಲ್ ಜೈನ್ ಹಾಗೂ ವಿಜಯನಗರ ರೈಲ್ವೇ ಅಭಿವೃದ್ಧಿ ಕ್ರಿಯಾ ಸಮಿತಿಯ ಪದಾಧಿಕಾರಿಗಳೂ ಮಾ.22 ರಂದು ಹೊಸಪೇಟೆ ರೈಲ್ವೇ ನಿಲ್ದಾಣಕ್ಕೆ ಪರಿವೀಕ್ಷಣೆಗೆ ಆಗಮಿಸಿದ್ದ ಪ್ರಧಾನ ವ್ಯವಸ್ಥಾಪಕರಿಗೆ ಸೌಲಭ್ಯ ಮುಂದುವರೆಸುವಂತೆ ಮನವಿ ಸಲ್ಲಿಸಲಾಗಿತ್ತು.

ಬೇಡಿಕೆಗೆ ಸ್ಪಂದಿಸಿರುವ ಪ್ರಧಾನ ವ್ಯವಸ್ಥಾಪಕರು ಪರಿಷ್ಕೃತ ಆದೇಶವನ್ನು ಹೊರಡಿಸಿದ್ದು ಈ ಹಿಂದೆ ಜಾರಿಯಲ್ಲಿದ್ದ ಸೌಲಭ್ಯ ಯಥಾಸ್ಥಿತಿ ಮುಂದುವರೆಸಲಾಗಿದೆ. ಮನವಿಗೆ ಸ್ಪಂದಿಸಿ ಸೌಲಭ್ಯ ಕಲ್ಪಿಸಿದ ನೈರುತ್ಯ ರೈಲ್ವೇ ಪ್ರಧಾನ ವ್ಯವಸ್ಥಾಪಕರಾದ ಮುಕುಲ್ ಸರಣ್ ಮಾತೂರ್ ಹಾಗೂ ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರಾದ ಅರವಿಂದ್ ಹರ್ಲೇಕರ್ ಅವರಿಗೆ ಬಾಬುಲಾಲ್ ಜೈನ್ ಹಾಗೂ ವಿಜಯನಗರ ರೈಲ್ವೇ ಅಭಿವೃದ್ಧಿ ಕ್ರಿಯಾ ಸಮಿತಿ ಧನ್ಯವಾದ ತಿಳಿಸಿದೆ.

# ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣೆಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

## ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ಕನ್ನಡಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡು, ಕನ್ನಡದಲ್ಲಿ ಹಲವು ಪ್ರಥಮಗಳನ್ನು ಸ್ಥಾಪಿಸಿ, ಹೊರಜಗತ್ತಿಗೆ ಕನ್ನಡವನ್ನು ಪರಿಚಯಿಸಿದ, ಕನ್ನಡದ ಹಿರಿಮೆಗೆ ಗರಿಮೂಡಿಸಿದ, ಹೊಸಗನ್ನಡದ ಅಧ್ವರ್ಯು ರೆವರೆಂಡ್ ಫರ್ಡಿನಂಡ್ ಕಿಟೆಲ್ ಹೆಸರು ಚಿರಂತನ, ಚಿರನೂತನವಾದುದು.

# ಕನ್ನಡ ನಿಘಂಟು ಕ್ಷೇತ್ರದ ಮೇರುಪುರುಷ ರೆವರೆಂಡ್ ಎಫ್. ಕಿಟೆಲ್

ಭಾರತೀಯ ಭಾಷೆಗಳಲ್ಲಿ ಯಾಸ್ಕನ ಸಂಸ್ಕೃತ ನಿಘಂಟು "ನಿರುಕ್ತ"(4ನೇಶತ.), ಕನ್ನಡದಲ್ಲಿ ರನ್ನಕವಿಯ (ಕ್ರಿ.ಶ.10ನೇಶತ.) ಹನ್ನೆರಡುವರೆ ಕಂದಪದ್ಯಗಳ "ರನ್ನಕಂದ"ವೇ ಮೊತ್ತಮೊದಲ ನಿಘಂಟುಗಳು. ನಡುಗನ್ನಡದ ವಿರಕ್ತತೋಂಟದಾರ್ಯನ "ಕರ್ಣಾಟಕ ಶಬ್ದಮಂಜರಿ" ಪದ್ಯರೂಪದ ನಿಘಂಟು. ಅಂದಿನಿಂದ ಇಂದಿನವರೆಗೆ ನಿಘಂಟು ಕ್ಷೇತ್ರದಲ್ಲಿ ಸಾಕಷ್ಟು ಬೆಳವಣಿಗೆಯಾಗಿದೆ. ಅವುಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ "ಬೃಹತ್ ಕನ್ನಡ–ಕನ್ನಡ ನಿಘಂಟು" (9000ಪುಟ; 8ಸಂಪುಟ; 4ಲಕ್ಷ ಕನ್ನಡ ಪದಗಳು; 1995) ಹಾಗೂ ಮೈಸೂರು ವಿಶ್ವವಿದ್ಯಾನಿಲಯದ "ಇಂಗ್ಲಿಷ್–ಕನ್ನಡ ನಿಘಂಟು" (6500ಪುಟ; 4ಸಂಪುಟ; 1.06ಪದಗಳು; 2006) ಪ್ರಮುಖವಾದವು. ನಿಘಂಟು ರಚನಾ ಶಾಸ್ತ್ರಕ್ಷೇತ್ರದಲ್ಲಿ ಅಗಾಧ ಪರಿಶ್ರಮ ವಹಿಸಿ ಹೊಸಮಾರ್ಗವನ್ನು ಹಾಕಿಕೊಟ್ಟವರಲ್ಲಿ ವಿದೇಶೀಯ ವಿದ್ವಾಂಸರೇ ಮೊದಲಿಗರೆನ್ನಬೇಕು.

ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಧರ್ಮಪ್ರಸಾರ, ವ್ಯಾಪಾರೋದ್ದೇಶಗಳಿಂದ ಭಾರತಕ್ಕೆ ಬಂದ ವಿದೇಶೀಯರು ಅನಿವಾರ್ಯವಾಗಿ ದೇಶಿಯ ಭಾಷೆಗಳನ್ನು ಕಲಿಯಬೇಕಾಯಿತು. ಪರಿಣಾಮವಾಗಿ ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಬೆಳವಣಿಗೆಗೆ ಪೂರಕವಾಗಿ ಸಾಹಿತ್ಯ ಭಂಡಾರ ಸಮೃದ್ಧವಾಯಿತು. ಇಂಥ ಮಹನೀಯರಲ್ಲಿ ರೆವರೆಂಡ್ ಫರ್ಡಿನಂಡ್ ಕಿಟೆಲ್ ಪ್ರಮುಖರು. ಏಪ್ರಿಲ್ 7 ರಂದು ಕಿಟೆಲ್‌ರ 193ನೆಯ ಜನ್ಮದಿನ (ಜನನ: ಏಳು, ಏಪ್ರಿಲ್ 1832) ಅವರ ಕನ್ನಡ–ಇಂಗ್ಲಿಷ್ ನಿಘಂಟಿಗೆ 131 ವರ್ಷಗಳು. "ಕನ್ನಡ ಭಾಷೆ ಜೀವಂತವಿರುವವರೆಗೂ ಉಳಿಯಬಲ್ಲ ಗ್ರಂಥವಿದು"ಎಂಬ ಹಿರಿಯ ವಿದ್ವಾಂಸ ಎಸ್.ಕೆ.ಹಾವನೂರರ ಮಾತು ನಿತ್ಯಸತ್ಯ. ಕಿಟೆಲ್ ಅವರನ್ನು "ಕನ್ನಡ ನಿಘಂಟುಶಾಸ್ತ್ರದ ಪಿತಾಮಹ"ರೆಂದರೆ ಲವಲೇಶವೂ ಉತ್ಪ್ರೇಕ್ಷೆಯಿಲ್ಲ.


ಜರ್ಮನಿಯ ಗಾಟ್ ಫ್ರೀಟ್ ಕಿಟೆಲ್ ಮತ್ತು ಟ್ಯೂಡೋವ್ ಹೆಲೆನ್ ಹ್ಯೂಬರ್ಟ್ ದಂಪತಿಗಳ ಐದು ಜನ ಮಕ್ಕಳಲ್ಲಿ ಮೊದಲನೆಯ ಮಗನಾಗಿ ರೆಸ್ಟರ್‌ಹಾವೆನ್‌ನ ಫ್ರಿಸಿಯಾದಲ್ಲಿ ಜನಿಸಿದ ಕಿಟೆಲ್ ತಮ್ಮೂರಿನಲ್ಲಿಯೇ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ, ಹೈಸ್ಕೂಲು ಮತ್ತು ಕಾಲೇಜು ಶಿಕ್ಷಣವನ್ನು ಔರಿಕ್ ಮತ್ತು ಸ್ವಿಟ್ಜರ್‌ಲ್ಯಾಂಡಿನ ಬಾಸೆಲ್ ನಗರದ ಮತಪ್ರಚಾರೋದ್ದೇಶದ ಮಿಷನ್ ಕಾಲೇಜಿನಲ್ಲಿ 1850ರಲ್ಲಿ ಪೂರೈಸಿದರು. ಭಾರತಕ್ಕೆ ಬರುವ ಮುನ್ನವೇ ಅವರಿಗೆ ಹೀಬ್ರೂ, ಗ್ರೀಕ್, ಲ್ಯಾಟಿನ್, ಫ್ರೆಂಚ್, ಇಂಗ್ಲಿಷ್ ಗೊತ್ತಿತ್ತು. 1853ರಲ್ಲಿ ಭಾರತಕ್ಕೆ ಪಾದ್ರಿಯಾಗಿ ಬಂದ ಕಿಟ್ಟೆಲ್ ಧಾರವಾಡದಲ್ಲಿ ನೆಲೆಸಿದರು. ಅನಂತರ ಮಂಗಳೂರಿನಲ್ಲಿ ಕನ್ನಡವನ್ನು ಕಲಿಯಲಾರಂಭಿಸಿ ಕನ್ನಡದಲ್ಲಿ ಆಳವಾದ ಪಾಂಡಿತ್ಯವನ್ನು ಪಡೆದರಲ್ಲದೆ ತಮಿಳು, ತೆಲುಗು, ಮಲಯಾಳಂ ಭಾಷೆಗಳನ್ನೂ ಕರಗತಮಾಡಿಕೊಂಡರು. ಹುಬ್ಬಳ್ಳಿ, ಧಾರವಾಡ, ಮಡಿಕೇರಿ, ಮುಂತಾದ ಸ್ಥಳಗಳಲ್ಲಿ ಕೆಲಸ ಮಾಡಿದರು. 1860ರಲ್ಲಿ ಪಾಲಿನ್ ಎಫ್ ಐತ್ ಎಂಬ ಜರ್ಮನ್ ಕನ್ಯೆಯೊಂದಿಗೆ ವಿವಾಹವಾದರು. ನಂತರದ ನಾಲ್ಕೈದು ವರ್ಷಗಳಲ್ಲಿ ಆಕೆ ಮಂಗಳೂರಿನಲ್ಲಿ ನಿಧನರಾದರು. ಮಡದಿಯ ಅಗಲಿಕೆಯಿಂದ ಕುಗ್ಗಿದ ಕಿಟೆಲ್ ಅವರಿಗೆ ಇಲ್ಲಿನ ಹವೆ ಒಗ್ಗಲಿಲ್ಲವಾದ ಕಾರಣ 1866ರಲ್ಲಿ ಆರೋಗ್ಯ ಸುಧಾರಣೆಗಾಗಿ ಸ್ವದೇಶಕ್ಕೆ ತೆರಳಿ, ಆರೋಗ್ಯ ಸುಧಾರಿಸುತ್ತಲೇ ತಮ್ಮ ಹೆಂಡತಿಯ ತಂಗಿ ಜ್ಯೂಲಿಯನ್ನು ಮದುವೆಯಾಗಿ, ಮರುವರ್ಷವೇ 1867ರಲ್ಲಿ ಭಾರತಕ್ಕೆ ಮರಳಿ ಬಂದರು.



ಡಾ.ಬಿ.ಜಿ. ಕನಕೇಶಮೂರ್ತಿ
ವಿಶ್ರಾಂತ ಪ್ರಾಧ್ಯಾಪಕರು.

Scan For Digital Colourful
HAMPI TIMES E-paper

**ನಿಘಂಟು ರಚನೆಗೆ ಪ್ರೇರಣೆ :** 1872ರಲ್ಲಿ ಕಿಟೆಲ್ ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸಿದ ಶಬ್ದಮಣಿದರ್ಪಣ ಕಿಟೆಲ್ ಕೋಶದ ರಚನೆಗೆ ನಾಂದಿಯಾಯಿತು. ಕಿಟೆಲ್‌ರ ಕಾರ್ಯಕ್ಷಮತೆಯಿಂದ ಚೋದ್ಯರಾದ ಡಾ. ಮೊಗ್ಲಿಂಗ್ ಮತ್ತು ಸರ್ ವಾಲ್ಟರ್ ಎಲಿಯೆಟ್ ಮುಂತಾದ ಆಂಗ್ಲ ಅಧಿಕಾರಿಗಳು ಕನ್ನಡ–ಇಂಗ್ಲಿಷ್ ನಿಘಂಟು ರಚನೆಯ ಅವಶ್ಯಕತೆಯನ್ನು ತಿಳಿಸಿ, ಅಗತ್ಯವಾದ ನೆರವನ್ನೊದಗಿಸುವ ಭರವಸೆಯನ್ನೂ ನೀಡಿದರು. 1828ರಲ್ಲಿಯೇ ವಿಲಿಯಂ ರೀವ್ ಅವರ ಕನ್ನಡ–ಇಂಗ್ಲಿಷ್, ಇಂಗ್ಲಿಷ್–ಕನ್ನಡ ಶಬ್ದಕೋಶಗಳು ಬಂದಿದ್ದರೂ, ಅವುಗಳಲ್ಲಿನ ಲೋಪದೋಷಗಳಿಂದಾಗಿ ಅವನ್ನು ಪರಿಷ್ಕರಿಸಿ ಹೊಸದಾದ ನಿಘಂಟನ್ನು ರಚಿಸ ಬೇಕೆಂದು ಕಿಟೆಲ್ ಆಲೋ ಚಿಸಿದರು. ಹೀಗೆ ಒಂದರ್ಥ ದಲ್ಲಿ ಕಿಟೆಲ್‌ರ ಶಬ್ದಕೋಶ ರಚನೆಗೆ ಅವರ ನಿಘಂಟು ತಳಹದಿಯಾಯಿತೆನ್ನಬಹುದು.




ಏಪ್ರಿಲ್ 7
ಕಿಟೆಲ್‌ರ ಜನ್ಮದಿನ




**ಕನ್ನಡ–ಇಂಗ್ಲಿಷ್ ನಿಘಂಟು:** ಕಿಟೆಲ್ ಅವರನ್ನು ಕುರಿತು ಕವಿತೆಯೊಂದರಲ್ಲಿ ದ. ರಾ. ಬೇಂದ್ರೆಯವರು "ಕನ್ನಡಕೆ ಕನ್ನಡಿಯ ಹಿಡಿಯೆ ದುಡಿದವ ನೀನು" ಎಂದಿರುವ ಮಾತು ಅಕ್ಷರಶಃ ಸತ್ಯ. ಸರ್ಕಾರದ ಆಹ್ವಾನವನ್ನೊಪ್ಪಿದ ಕಿಟೆಲ್ ನಿಘಂಟಿನ ರೂಪರೇಷೆಗಳನ್ನು ಸಿದ್ಧಗೊಳಿಸಿ 1872ರಲ್ಲಿ ರಚನೆಗೆ ತೊಡಗಿದರು. ಆದರೆ ಅನಾರೋಗ್ಯದಿಂದಾಗಿ 1877ರಲ್ಲಿ ಜರ್ಮನಿಗೆ ಹೋಗಿ ಎಸ್ಲಿಂಗ್‌ನಲ್ಲಿ 1883ರವರೆಗೆ ಅಪಾರ ಪರಿಶ್ರಮದಿಂದ ಅಲ್ಲಿಯೇ ನಿಘಂಟಿನ ಪ್ರಥಮ ಕರಡನ್ನು ಸಿದ್ಧಪಡಿಸಿದರು. ಕನ್ನಡ ವಿದ್ವಾಂಸರ ಜೊತೆ ಚರ್ಚಿಸಿ ಅಂತಿಮ ಪ್ರತಿಯನ್ನು ಸಿದ್ಧಪಡಿಸಲು 1883ರಲ್ಲಿ ಪುನಃ ಧಾರವಾಡಕ್ಕೆ ಬಂದರು. ಪಂಡಿತರ ಸಹಕಾರದಿಂದ ಪ್ರಾಚೀನ ಕನ್ನಡ ಗ್ರಂಥಗಳ ಶಬ್ದಸಂಪತ್ತಿಯನ್ನು ಸಿದ್ಧಪಡಿಸಿ, ದ್ರಾವಿಡ ಜ್ಞಾತಿಶಬ್ದಗಳನ್ನು ಸಂಗ್ರಹಿಸಿ ಅವುಗಳಿಗೆ ನಿಷ್ಪತ್ತಿಯನ್ನು ಬರೆದರು. ಗ್ರಂಥಸ್ಥ ಉದಾಹರಣೆಗಳೊಂದಿಗೆ ಆಡುನುಡಿಗಳನ್ನು, ಗಾದೆಗಳನ್ನು ಸಂಗ್ರಹಿಸಿದರು. 'ಹಲವಾರು ಪದಾರ್ಥಗಳನ್ನು ಕಿಸೆಯಲ್ಲಿಟ್ಟುಕೊಂಡು ಧಾರವಾಡ, ಹುಬ್ಬಳ್ಳಿಗಳ ಬೀದಿಗಳಲ್ಲಿ, ಸಂತೆಗಳಲ್ಲಿ ಸಂಚರಿಸಿ ಹಳ್ಳಿಗರನ್ನು ಕೇಳಿ ಅರ್ಥಸಂಗ್ರಹ ಮಾಡುತ್ತಿದ್ದರು.' ಎಂಬ ಮಾತು ಅವರು ಕ್ಷೇತ್ರಕಾರ್ಯಕ್ಕೆ ನೀಡಿದ್ದ ಮಹತ್ವವನ್ನು ಬಿಂಬಿಸುತ್ತದೆ. ಹೀಗೆ 70000 ಶಬ್ದಗಳನ್ನು ಒಳಗೊಂಡ ಹಸ್ತಪ್ರತಿ 1892ರಲ್ಲಿ ಸಿದ್ಧವಾಯಿತು. ಅದರ ಮುದ್ರಣ ಕಾರ್ಯವನ್ನು ಮಂಗಳೂರಿನಲ್ಲಿ ಬಾಸೆಲ್ ಮಿಷನ್‌ನವರಿಗೆ ಒಪ್ಪಿಸಿದರು. ಅನಾರೋಗ್ಯದಿಂದಾಗಿ ಮತ್ತೆ ಯುರೋಪಿಗೆ ತೆರಳಿದರು. ಅಲ್ಲಿಂದಲೇ ಶಬ್ದಕೋಶವನ್ನು ಪರಿವೀಕ್ಷಿಸಿ 22, ಜುಲೈ 1893ರಲ್ಲಿ 47ಪುಟಗಳ ಮೊದಲ ಮಾತುಗಳನ್ನು ಬರೆದರು. 1894ರಲ್ಲಿ 1752 ಪುಟಗಳ ಬೃಹತ್ ಕಿಟೆಲ್ ಕನ್ನಡ–ಇಂಗ್ಲಿಷ್ ನಿಘಂಟು ಅಚ್ಚಾಗಿ ಬಿಡುಗಡೆಯಾಯಿತು.

ವೈಜ್ಞಾನಿಕ ದೃಷ್ಟಿಕೋನ ಹಾಗೂ ಶಾಸ್ತ್ರೀಯವಾಗಿ ಸಿದ್ಧಪಡಿಸಿದ, ಖಚಿತವೂ, ಶಾಸ್ತ್ರೀಯವೂ, ಪ್ರಮಾಣಭೂತವೂ ಆದ ಈ ಬಗೆಯ ನಿಘಂಟು ಭರತಖಂಡದ ಯಾವ ದೇಶಭಾಷೆಗಳಲ್ಲೂ ಇಲ್ಲವೆಂದು ವಿದ್ವಾಂಸರು ವ್ಯಕ್ತಪಡಿಸಿರುವ ಅಭಿಪ್ರಾಯ ಕಿಟೆಲ್‌ರನ್ನು "ನಿಘಂಟು ಕ್ಷೇತ್ರದ ಮೇರುಪುರುಷರ"ನ್ನಾಗಿಸಿದೆ. ಇವರ ಈ ಮಹತ್ಕಾರ್ಯಕ್ಕೆ ಟ್ಯೂಬಿಂಗನ್ನಿನ ವಿಶ್ವವಿದ್ಯಾನಿಲಯ 1896ರಲ್ಲಿ ಡಾಕ್ಟರ್ ಆಫ್ ಫಿಲಾಸಫಿ ಪದವಿಯನ್ನು ನೀಡಿ ಗೌರವಿಸಿತು. ಇದು ಕನ್ನಡದ ಕೆಲಸಕ್ಕೆ ದೊರೆತ ಮೊದಲ ವಿದೇಶೀಯ ಡಾಕ್ಟರೇಟ್ ಗೌರವವಾಗಿದೆ.

ಕಿಟೆಲ್ ನಿಘಂಟಿನ ವಿಶಿಷ್ಟತೆಗಳು: 25 ವರ್ಷಗಳ ಅವಿಶ್ರಾಂತ ದುಡಿಮೆಯ ಫಲವಾಗಿ ಬಂದ ಇದು ಭಾರತೀಯ ಶಬ್ದಕೋಶಗಳ ಇತಿಹಾಸದಲ್ಲಿಯೇ ಒಂದು ಸ್ಮಾರಕ ಕೃತಿಯಾಗಿದೆ. ಶಬ್ದಕೋಶದ ಮುನ್ನುಡಿಯಲ್ಲಿ ಕನ್ನಡ ಭಾಷೆಯ ಬೆಳವಣಿಗೆ; ನಿಘಂಟು ರಚನೆಯ ಸಂದರ್ಭದಲ್ಲಿ ಬಳಸಿಕೊಂಡ ಪ್ರಾಚೀನ(18),ಮಧ್ಯಕಾಲೀನ(18), ಆಧುನಿಕ(14) ಕನ್ನಡ ಗ್ರಂಥಗಳ ಪಟ್ಟಿ; ಅನುಸರಿಸಿರುವ ಕ್ರಮ; ಲಿಪ್ಯಂತರದಲ್ಲಿ ಬಳಸಿರುವ ಸಂಜ್ಞೆಗಳ ಪಟ್ಟಿ; ದ್ರಾವಿಡ ಭಾಷೆಗಳಿಂದ ಸಂಸ್ಕೃತಕ್ಕೆ ಹೋಗಿರಬಹುದಾದ ಸುಮಾರು 420 ಪದಗಳ ವಿಸ್ತೃತ ವಿವರ; ಪ್ರೋತ್ಸಾಹ, ನೆರವು ನೀಡಿದ ಡಾ.ಹೆಚ್.ಮೊಗ್ಲಿಂಗ್, ಬಿ. ಎಲ್.ರೈಸ್, ರೆ.ಎಫ್.ಫ್ಲೀಟ್, ಕನ್ನಡಿಗರಾದ ಹುಬ್ಬಳ್ಳಿಯ ಲಿಂಗಾಯತ ಅಯ್ಯ, ವಸ್ತ್ರದ ಶಿವಲಿಂಗಪ್ಪ, ಮೈಸೂರಿನ ಎಂ.ಸಿ.ಶ್ರೀನಿವಾಸಾಚಾರಿ, ಭಾರದ್ವಾಜ ಶಿವರಾವ್ ಮೊದಲಾದವರ ನೆರವಿನ ಸ್ಮರಣೆ; ಶಬ್ದಜೋಡಣೆಯಲ್ಲಿ ಸಂಸ್ಕೃತ ಶಬ್ದಗಳನ್ನು ರೋಮನ್ ಅಕ್ಷರಗಳಲ್ಲೂ; ಕನ್ನಡ ಶಬ್ದಗಳನ್ನು ಆಂಟಿಕ್ (ದಪ್ಪ) ಅಕ್ಷರಗಳಲ್ಲೂ ಕೊಟ್ಟಿರುವುದು–ನಿಘಂಟಿನ ವಿಶೇಷತೆಯಾಗಿದ್ದು ಅವರ ಪರಿಶ್ರಮದ ಅಗಾಧತೆಯು ಸಾಗರೋಪಮವಾದುದೆಂಬುದನ್ನು ಸಾಕ್ಷೀಕರಿಸುತ್ತದೆ.

ಈ ನಿಘಂಟಿನ ಪರಿಷ್ಕೃತ ಮತ್ತು ವಿಸ್ತೃತ ಆವೃತ್ತಿಯನ್ನು ಮದರಾಸ್ ವಿಶ್ವವಿದ್ಯಾನಿಲಯ ನಾಲ್ಕು ಸಂಪುಟಗಳಲ್ಲಿ (1781 ಪುಟಗಳು) 1968–71ರಲ್ಲಿ ಹೊರತಂದಿದೆ. ಕಿಟೆಲ್ ಕೋಶದ ಶತಮಾನೋತ್ಸವವನ್ನೂ ಅರ್ಥಪೂರ್ಣವಾಗಿ 1994ರಲ್ಲಿ ಆಚರಿಸಲಾಗಿದೆ. ಬೆಂಗಳೂರು, ಮಂಗಳೂರುಗಳಲ್ಲಿ ಕಿಟೆಲ್‌ರ ಪ್ರತಿಮೆಯನ್ನು ಸ್ಥಾಪನೆ, ಧಾರವಾಡದಲ್ಲಿ ಕಿಟೆಲ್ ಸ್ಮಾರಕ ಕಾಲೇಜಿನ ಪ್ರಾರಂಭ, ಕಿಟೆಲ್ ಮ್ಯೂಸಿಯಂ, ಬೆಂಗಳೂರಿನ ಆಸ್ಟಿನ್‌ನಗರಕ್ಕೆ ಕಿಟೆಲ್‌ನಗರವೆಂದು ಮರುನಾಮಕರಣ ಮುಂತಾದವು ಅವರಿಗೆ ಅರ್ಪಿಸಿದ ಕೃತಜ್ಞತೆಯ ಪ್ರತೀಕಗಳು.

ಕಿಟೆಲ್ ನಿಘಂಟು ರಚನೆಯ ಜೊತೆಗೆ ಇತರ ಕ್ಷೇತ್ರಗಳಲ್ಲೂ ಕೃಷಿ ಮಾಡಿದ್ದಾರೆ. ದೇ. ಜವರೇಗೌಡ ಅವರು "ಕನ್ನಡ ಗ್ರಂಥ ಸಂಪಾದನೆ ಹಾಗೂ ಸಂಶೋಧನೆಗಳಿಗೆ ಗುದ್ದಲಿ ಪೂಜೆ ಮಾಡಿ ಭದ್ರಬುನಾದಿಯನ್ನು ಹಾಕಿದವರಲ್ಲಿ ಕಿಟೆಲ್ ಅವರೇ ಪ್ರಥಮರು. ಕನ್ನಡ ವಿದ್ವತ್ ಪ್ರಪಂಚದ ಮೊದಲ ಆಚಾರ್ಯ ಪುರುಷರು." ಎಂದೂ, ನಡೆದಾಡುವ ಶಬ್ದಕೋಶವೆಂದೇ ಖ್ಯಾತರಾದ ಡಿ.ಎಲ್. ನರಸಿಂಹಾಚಾರ್ "ಕಿಟೆಲ್ ಕನ್ನಡದ ಋಷಿಗಳಲ್ಲಿ ಒಬ್ಬರು" ಎಂದಿದ್ದಾರೆ.

ಕಿಟೆಲ್ ಅವರು ಸಂಪಾದಿಸಿ ಪ್ರಕಟಿಸಿದ 1872ರಲ್ಲಿ ಮಡಿಕೇರಿಯಲ್ಲಿದ್ದಾಗ ಸಂಪಾದಿಸಿ ಪ್ರಕಟಿಸಿದ "ಕೇಶಿರಾಜನ ಶಬ್ದಮಣಿದರ್ಪಣ", ಈ ಹಿಂದೆ ಜಾನ್ ಗ್ಯಾರಟ್ ಪ್ರಕಟಿಸಿದ್ದ ಶಬ್ದಮಣಿದರ್ಪಣದ ಆವೃತ್ತಿಯಲ್ಲಿದ್ದ ಹಲವು ದೋಷಗಳನ್ನು ಸರಿಪಡಿಸಿ ಪರಿಷ್ಕೃತ ಆವೃತ್ತಿಯೊಂದನ್ನು ಕಿಟೆಲ್ ಪ್ರಕಟಿಸಿದರು. ಇದರಲ್ಲಿನ ಅವರ 26 ಪುಟಗಳ ಪ್ರಸ್ತಾವನೆ ಕನ್ನಡ ಭಾಷೆ, ಸಾಹಿತ್ಯಗಳ ಮೇಲಿನ ಅವರ ಪ್ರಭುತ್ವ, ವಿದ್ವತ್ತನ್ನು ಪ್ರಕಟಪಡಿಸಿದೆ. "ಕರ್ನಾಟಕ ಕಾವ್ಯ ಮಾಲೆ" (1874), 1875ರಲ್ಲಿ ಪ್ರಥಮವಾಗಿ ಸಂಪಾದಿಸಿ ಪ್ರಕಟಿಸಿದ "ನಾಗವರ್ಮನ ಛಂದೋಂಬುಧಿ"ಗಳು ವೈಜ್ಞಾನಿಕ ರೀತಿಯ ಗ್ರಂಥಸಂಪಾದನೆಯ ವಿಧಾನ ಹಾಗೂ ಕನ್ನಡ ಸಂಶೋಧನೆಗೆಹಾಕಿದಅಡಿಗಲ್ಲುಗಳಾಗಿವೆ."ಛಂದೋಂಬುಧಿ"ಯಲ್ಲಿ ಕನ್ನಡ ಸಾಹಿತ್ಯವನ್ನು ಕುರಿತು ಬರೆದ ಆ್ಯನ್ ಎಸ್ಸೆ ಆನ್ ಕ್ಯಾನರೀಸ್ ಲಿಟರೇಚರ್ ಮತ್ತು ಇಂಗ್ಲಿಷಿನಲ್ಲಿ ಬರೆದ ಗ್ರ್ಯಾಮರ್ ಆಫ್ ದಿ ಕ್ಯಾನರೀಸ್ ಲಾಂಗ್ವೇಜ್ (1903) ಇವು ಮಹತ್ವವಾದವು. "ಕನ್ನಡ ಪಂಚತಂತ್ರ", "ಪರಮಾತ್ಮಜ್ಞಾನ" ಮತ್ತು ಷಟ್ಪದಿ ಛಂದಸ್ಸಿನಲ್ಲಿ ಏಸುಕ್ರಿಸ್ತನ ಚರಿತ್ರೆಯನ್ನು ಇಂಡಿಯನ್ ಆ್ಯಂಟಿಕ್ವೆರಿಯಲ್ಲಿ "ಇಂಡಿಯನ್ ಆವೆಂಜಲಿಕಲ್ ರಿವ್ಯೂ", "ಎಪಿಗ್ರಾಫಿಯಾ ಇಂಡಿಕಾ"ಗಳಲ್ಲಿ ಇಂಗ್ಲಿಷ್‌ನಲ್ಲಿ ಬರೆದ 24 ಲೇಖನಗಳ ಪಟ್ಟಿಯನ್ನು ನೋಡಿದರೆ ಅವರ ಬಹುಶ್ರುತತ್ವದ ಅರಿವಾಗದಿರದು. ಕನ್ನಡಕ್ಕಾಗಿ ತಮ್ಮ ಜೀವನವನ್ನೇ ಸವೆಸಿದ ಮೇರುಪುರುಷ ಎಪ್ಪತ್ತೊಂದನೆಯ ವಯಸ್ಸಿನಲ್ಲಿ, 19, ಡಿಸೆಂಬರ್ 1903ರಂದು ನಮ್ಮನ್ನಗಲಿದರು.

ತಮ್ಮ ಕೊನೆಯ ದಿನಗಳಲ್ಲೂ ಕನ್ನಡವನ್ನು ಇನ್ನೊಮ್ಮೆ ಕೇಳಬೇಕೆಂದು ಅಪೇಕ್ಷಿಪಟ್ಟರು. ಕರ್ನಾಟಕದವರೊಬ್ಬರು ಅವರನ್ನು ಕಂಡು ಇಂಗ್ಲಿಷಿನಲ್ಲಿ ಮಾತನಾಡಲು ಹವಣಿಸಿದಾಗ 'ಕನ್ನಡದಲ್ಲಿ ಮಾತಾಡಿ ತಮ್ಮನ್ನು ಪುನೀತರನ್ನಾಗಿ ಮಾಡಬೇಕೆಂದು' ಪ್ರಾರ್ಥಿಸಿದರಂತೆ! ಕನ್ನಡಪ್ರಜ್ಞೆ ಹಾಗೂ ಕನ್ನಡ ಭಾಷೆ ಅವರನ್ನು ಸೂರೆಗೊಂಡಿದ್ದ ಬಗೆಯ ಪ್ರತೀಕವಿದು. ಶಾಸ್ತ್ರಯೋಗಿ, ಪ್ರತಿಭಾಸಂಪನ್ನ, ಕನ್ನಡಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡು, ಕನ್ನಡದಲ್ಲಿ ಹಲವು ಪ್ರಥಮಗಳನ್ನು ಸ್ಥಾಪಿಸಿ, ಹೊರಜಗತ್ತಿಗೆ ಕನ್ನಡವನ್ನು ಪರಿಚಯಿಸಿದ, ಕನ್ನಡದ ಹಿರಿಮೆಗೆ ಗರಿಮೂಡಿಸಿದ, ಹೊಸಗನ್ನಡದ ಅಧ್ವರ್ಯು ರೆವರೆಂಡ್ ಫರ್ಡಿನಂಡ್ ಕಿಟೆಲ್ ಹೆಸರು ಚಿರಂತನ, ಚಿರನೂತನವಾದುದು.

# ಕ್ರೀಡೆಯು ದೈಹಿಕ–ಮಾನಸಿಕ ಆರೋಗ್ಯದ ಅವಿಭಾಜ್ಯ ಅಂಗ: ಮುಲ್ಲಂಗಿ ನಂದೀಶ್

■ **ಹಂಪಿ ಟೈಮ್ಸ್ ಬಳ್ಳಾರಿ**

ದೈನಂದಿನ ಜೀವನದಲ್ಲಿ ಪ್ರತಿಯೊಬ್ಬರ ದೈಹಿಕ ಮತ್ತು ಮಾನಸಿಕ ಸದೃಢ ಆರೋಗ್ಯಕ್ಕೆ ಕ್ರೀಡೆಗಳು ಅವಿಭಾಜ್ಯ ಅಂಗವಾಗಿದ್ದು, ಪ್ರತಿದಿನ ಸಮಯಕ್ಕನುಗುಣವಾಗಿ ಕ್ರೀಡೆ ಹಾಗೂ ವ್ಯಾಯಾಮಗಳಿಗೆ ಮೀಸಲಿಡಬೇಕು ಎಂದು ಬಳ್ಳಾರಿ ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬಳ್ಳಾರಿ ಇವರ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಕ್ರೀಡಾಂಗಣ ಮೈದಾನದಲ್ಲಿ ಶನಿವಾರ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಮಾತನಾಡಿದರು. ಪ್ರಸ್ತುತದಲ್ಲಿ ಎಲ್ಲರೂ ಮೊಬೈಲ್ ಗೀಳಿಗೆ ದಾಸರಾಗುತ್ತಿದ್ದು, ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡುವಲ್ಲಿ ಸೋಮಾರಿತನ ಹಿಂಬಾಲಿಸುತ್ತಿದೆ. ಹಾಗಾಗಿ ಎಲ್ಲರೂ ತಪ್ಪದೇ ಸಿಗುವ ಸಮಯದಲ್ಲಿಯೇ ನಿಯಮಿತ ವ್ಯಾಯಾಮ ಮತ್ತು ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳೋಣ ಎಂದು ಕರೆ ನೀಡಿದರು.

ಜಿಲ್ಲಾ ಪಂಚಾಯತ್‌ನ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೈರ್ ಕ್ರೀಡಾ ಪ್ರತಿಜ್ಞಾ ವಿಧಿ ಬೋಧಿಸಿ ಮಾತನಾಡಿ, ದೈಹಿಕ ಹಾಗೂ ಮಾನಸಿಕ ನೆಮ್ಮದಿಗೆ ಕ್ರೀಡಾಕೂಟಗಳು ಹೆಚ್ಚು ಸಹಕಾರಿಯಾಗಿದ್ದು, ಸರ್ಕಾರಿ ನೌಕರರು ಉತ್ಸಾಹದಿಂದ ಭಾಗವಹಿಸಬೇಕು. ಕ್ರೀಡಾ ಚಟುವಟಿಕೆಗಳು ಕೇವಲ ಒಂದು ದಿನಕ್ಕೆ ಸೀಮಿತವಾಗದೇ ಹೆಚ್ಚಾಗಿ ಆಯೋಜಿಸಬೇಕು ಎಂದು ಹೇಳಿದರು.

ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್. ಎನ್, ನೌಕರರ ಸಂಘದ ಜಿಲ್ಲಾ ಶಾಖೆಯ ಕಾರ್ಯದರ್ಶಿ ಜಿ.ವೈ.ತಿಪ್ಪಾರೆಡ್ಡಿ ಮಾತನಾಡಿದರು. ಬಳಿಕ ಗಣ್ಯರೆಲ್ಲರೂ ಸೇರಿ ಕ್ರೀಡಾ ಧ್ವಜಾರೋಹಣಾ ನೆರವೇರಿಸಿದರು. ಡಾ.ಬಾಬು ಜಗಜೀವನ್‌ರಾಮ್ ಅವರ ಭಾವಚಿತ್ರಕ್ಕೆ ಗಣ್ಯರೆಲ್ಲರೂ ಸೇರಿ ಪುಷ್ಪಾರ್ಚನೆಗೈದರು.

ಈ ಸಂದರ್ಭದಲ್ಲಿ ಅಬಕಾರಿ ಉಪ ಆಯುಕ್ತ ಮಂಜುನಾಥ.ಎನ್., ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು, ರಾಜ್ಯ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷರು ಹಾಗೂ ಜಿಲ್ಲಾಧ್ಯಕ್ಷರಾದ ಎಂ.ಎ.ಆಸೀಫ್ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ಕೆ.ಗ್ರೇಸಿ, ರಾಜ್ಯ ಜಂಟಿ ಕಾರ್ಯದರ್ಶಿ ಎನ್. ರಮೇಶ್, ದೊಡ್ಡಬಸಪ್ಪ ಇತರರಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಹಕ್ಕಿಗಳ ಮಾತು



ಈ ಭೂಮಂಡಲವೇ ನಮ್ಮದು
ಆದರೂ ಸುತ್ತುವ ಆಸೆ ನಮಗಿಲ್ಲ
ಉದರ ತುಂಬಲು, ಮತ್ತೇನು ಬೇಕಿಲ್ಲ

ಅಲ್ಲೊಂದು ಇಲ್ಲೊಂದು ಮನೆ ಇಲ್ಲ
ಸಂತಾನಕ್ಕೆ ಬೇಕು ಒಂದು ಸೂರು
ರೆಕ್ಕೆ ಬಂದರೆ ಸೂರು ಬಿಟ್ಟು ಮೇಲೆ ಹಾರು

ರೆಕ್ಕೆ ಬಲಿತ ಹಕ್ಕಿಗೆ ನಾನಾರೋ ನೀನಾರೋ
ಸಮ್ಮಂಧ ಬೆಸೆಯುವ ಆಸೆ ಕಿಂಚಿತ್ತು
ನಮಗಿಲ್ಲ
ಒಟ್ಟಾಗಿ ಗಗನದಲ್ಲಿ ವಿಹರಿಸುವೆವು ಬೇಧವಿಲ್ಲ

ತಿನ್ನಲು ಅನ್ನ ಕುಡಿಯಲು ನೀರು
ಅಷ್ಟೇ ನಮಗಿರುವ ಮಹಾ ಆಸೆ
ಅಲ್ಲೇ ನಮ್ಮ ಪರಿವಾರದೊಂದಿಗೆ ವಾಸ

ಕೂಡಿಡುವ ಚಿಂತೆ ನಮಗಾರಿಗೂ ಇಲ್ಲ
ಮೇಲು ಕೀಳು ಭಾವವು ನಮಗಿಲ್ಲ
ಸಿಕ್ಕಷ್ಟೇ ತಿಂದು ಜೀವಿಸುವ ಪರಿ ನಮ್ಮದು

ಮನುಜರಂತೆ ದ್ವೇಷ ಅಸೂಯೆ ಇಲ್ಲ
ಮಲಿನತೆ ನಮ್ಮಲ್ಲಿ ಹುಡುಕಿದರೂ ಇಲ್ಲ,
ಇದ್ದಷ್ಟೇ ಬದುಕು ಬದುಕಿದಷ್ಟೇ ಜೀವನ

– ಚಂದ್ರಶೇಖರಯ್ಯ ರೋಣದಮಠ

## ಆನಂದ ಬಾಣ

ನೀ ಕಾಪಾಡಿದರೆ ನನ್ನನ್ನು
ವರುಷ. ನಾ ಕಾಯುವೆ
ನೆರಳಾಗಿ ನೂರು ವರ್ಷ




## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ವಿಶ್ವಾವಸು

**06–04–2025 – ಭಾನುವಾರ**

| | |
|---|---|
| ತಿಥಿ | : ಅಷ್ಟಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪುನರ್ವಸು |
| ಯೋಗ | : ಅತಿಗಂಡ |
| ಕರಣ | : ವಿಷ್ಟಿ |
| ಸೂರ್ಯೋದಯ | : 06:16:39 |
| ಸೂರ್ಯಾಸ್ತ | : 18:42:45 |
| ರಾಹು ಕಾಲ | : 09:23–10:56 |
| ಯಮಘಂಡ ಕಾಲ | : 14:03–15:36 |
| ಗುಳಿಕ ಕಾಲ | : 06:17–07:50 |



## ತುಂಗಭದ್ರಾ ನೀರಿನ ಮಟ್ಟ

ಶನಿವಾರ : 05–04–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1586.02 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 5116 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 8.010 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1579.82ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 881 ಕ್ಯುಸೆಕ್ |
| ಸಾಮರ್ಥ್ಯ | 4.380 ಟಿಎಂಸಿ |

## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

# ಅಣ್ಣನೆಂಬ ಆತ್ಮೀಯ ಬಂಧು

ಬಹಳ ಸಮಯ ಬೇಡ, ಈಗ್ಗೆ 50 ರಿಂದ 60 ವರ್ಷಗಳ ಮಾತು. ನನ್ನ ಅಮ್ಮನ ಕಾಲ ಅಂದರೂ ಒಂದು ಲೆಕ್ಕದಲ್ಲಿ ಸರಿಯಾಗಬಹುದು. ಈಗಿನಂತೆ ಆಗಿನ್ನೂ ಮನೆಯಲ್ಲಿ ಇಷ್ಟೇ ಮಕ್ಕಳಿರಬೇಕು, ಇಷ್ಟೇ ಮಕ್ಕಳನ್ನು ಹೊಂದಬೇಕು ಎನ್ನುವ ವಿಚಾರವೇ ಇದ್ದಿರಲಿಲ್ಲ. ಈಗೀಗ್ಗೆ ನಾವಿಬ್ಬರು ನಮಗಿಬ್ಬರು ಎನ್ನುವ ಮಾತು ಹಳತಾಗಿ, ನಾವಿಬ್ಬರು ನಮಗೊಬ್ಬರೆ ಎನ್ನುವ ಘೋಷಣೆ ಎಲ್ಲೆಲ್ಲೂ ರಾರಾಜಿಸುತ್ತಿದೆ

ಒಳ್ಳೆಯ ವಿಚಾರವೆ, ಒಂದು ಕಡೆ ಜನಸಂಖೆಯ ನಿಯಂತ್ರಣಕ್ಕೆ ಕೈಗೊಳ್ಳುತ್ತಿರುವ ಅನಿವಾರ್ಯ ಮತ್ತು ಅವಶ್ಯಕ ಕ್ರಮಗಳಲ್ಲಿ ಒಂದಾಗಿದೆ. ಆದರೆ

ನಾನಿಲ್ಲಿ ಹೇಳ ಹೊರಟಿರುವುದು ಇತ್ತೀಚಿನ ದಿನಗಳಲ್ಲಿ ಮಾನವೀಯ ಸಂಬಂದಗಳಲ್ಲಿ ಉಂಟಾದಂತಹ ಅಮೂಲಾಗ್ರವಾದ ವ್ಯತಿರಿಕ್ತ ಬದಲಾವಣೆಗಳ ಬಗ್ಗೆ. ಈಗಲೂ ನಮ್ಮ ಮನೆಯಲ್ಲಿ ನಮ್ಮ ಕಡೆಯಲ್ಲಿ ಮಾತನಾಡುವುದಿದೆ, "ಹೆಣ್ಣು ಹುಟ್ಟುದ ಮನೆ ತಣ್ಣಗೆ" ಎಷ್ಟು ನಿಜವಾದ ಮಾತೆಂದರೆ,

**ಮಕ್ಕಳಿರಬೇಕು ಮನೆ ತುಂಭಾ,**
**ಅದರೊಳು ಅಕ್ಕತಂಗಿಯರಿರಬೇಕು ಬೆಳಕಾಂಗ.**
**ಜೊತೆಗಿದ್ದರಂತೂ ಅಣ್ಣ ತಮ್ಮಂದಿರು,**
**ಇದ್ದಂತೆ ಅಪ್ಪ ಅನುದಿನವು ಬೆನ್ನಾಗಿ, ಬದುಕೊಂದು ಕಣ್ಣಾಗಿ.**

ಆಗೆಲ್ಲ ನಮ್ಮಲ್ಲಿ ಸಹಜವೆಂಬಂತೆ ಅವಿಭಕ್ತ ಕುಟುಂಬಗಳೇ ಇದ್ದುದರಿಂದ, ಮನೆಯ ತುಂಬೆಲ್ಲಾ ಮಕ್ಕಳಿರುತ್ತಿದ್ದರು. ಇವೆಲ್ಲವುಗಳ ಮಧ್ಯ ಆಟ ಪಾಠಗಳ ಹೊರತಾಗಿಯೂ ಅಕ್ಕ–ತಂಗಿಯರು, ಅಣ್ಣ ತಮ್ಮಂದಿರ ಮಧ್ಯ ಒಂದು ರೀತಿಯ ಬಂದನ ವಿದ್ದರೆ. ಈ ಅಣ್ಣ ತಂಗಿಯ ಬಾಂದವ್ಯವೇ ಬೇರೆಯಾಗಿರುತ್ತಿತ್ತು. ಬೆಳೆಬೆಳೆಯುತ್ತ ಅಣ್ಣ ತಂಗಿಯರು ಅತ್ಯಂತ ಆತ್ಮೀಯರಾಗುತ್ತಿದ್ದರು. ಮೇಲ್ನೋಟಕ್ಕೆ ಅಣ್ಣನಾದವನು ತಂಗಿಯ ಎಲ್ಲಾ ಚಟುವಟಿಕೆಗಳನ್ನು ನಿಯಂತ್ರಿಸುವಂತೆ ಕಂಡರೂ, ಒಳಾರ್ಥದಲ್ಲಿ ಅವಳಿಗೆ ಅಗತ್ಯವಾದ ಸಹಾಯ, ಅವಳಿಗೆ ಬೇಕಾದ ರಕ್ಷಣೆ ಮತ್ತು ಪ್ರೋತ್ಸಾಹವನ್ನು ಸದಾ ಅವಳ ಅರಿವಿಗೆ ಬಾರದಂತೆ ನೀಡುವವನು ಅಂದರೆ ಅವನು ಅಣ್ಣನೇ ಆಗಿರುತ್ತಾನೆ.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

ನಮ್ಮ ಜನಪದರು ನಮ್ಮ ಹೇಣ್ಣು ಮಕ್ಕಳ ಅವರ ಸಹೋದರರ ನಡುವಿನ ಆ ಪ್ರೀತಿ ವಿಸ್ವಾಸವನ್ನು ವರ್ಣಿಸುವ ರೀತಿಯೇ ವೈಶಿಷ್ಟವಾದದ್ದು,

**ಹೆಣ್ಣಿನ ಜನುಮಕೆ ಅಣ್ಣ ತಮ್ಮರು ಬೇಕು**
**ಬೆನ್ನು ಕಟ್ಟುವರು ಸಭೆಯೊಳಗೆ**
**ಸಾವಿರ ಹೊನ್ನು ಕಟ್ಟುವರು ಉಡಿಯೊಳಗೆ.**

ಎನ್ನುವ ಮಾತಿನಲ್ಲೇ ಈ ಬಿಡಿಸಲಾಗದ ಬಂದನದ ಬಗ್ಗೆ ಎಲ್ಲಾ ತಿಳಿಯುತ್ತದೆ.

ಮೇಲ್ನೋಟಕ್ಕೆ ಸದಾ ಸಿಡುಕಿನ ಅಣ್ಣ, ಒಳಗೊಳಗೆ ಶಾಂತವೆತ್ತ ಮೂರ್ತಿ ಎನ್ನುವುದು ಬಹಳಷ್ಟು ಜನಕ್ಕೆ ಗೊತ್ತಿರದ ಸಂಗತಿ. ಅಪ್ಪನ ನಂತರ, ಅಪ್ಪನಂತೆಯೇ ಯಾರಾದರು ಮನೆಯ ಹೆಣ್ಣು ಮಕ್ಕಳನ್ನು ಸಾಕಿ ಸಲುವುವವರು, ಸದಾಕಾಲ ಅವರಿಗೆ ಬೆಂಗಾವಲಾಗಿ ನ್ಲುವ ಜೀವ ವೆಂದರೆ ಅದು ಅಣ್ಣ ಮಾತ್ರ. ಅದು ಚಿಕ್ಕ ಮಕ್ಕಳಿದ್ದಾಗಿನ ಶಾಲೆಗೆ ಹೋಗುವ ಸಂದರ್ಭವಾಗಿರಬಹುದು, ಬೆಳೆ ಬೆಳೆಯುತ್ತಾ ಬೆಳೆದು ನಿಂತ ಅಕ್ಕ ತಂಗಿಯರ ಪಾಲಿಗೆ ಅಣ್ಣನೇ ಆ ಮನೆಯ ಹೀರೊ ಆಗಿರುತ್ತಾನೆ. ಆ ಸಮಯದಲ್ಲಿ ಅಕ್ಕ ತಂಗಿಯರನ್ನು ಮದುವೆ ಮಾಡಿಕೊಡುವುದರಿಂದ ಹಿಡಿದು, ಅವರನ್ನು ಕಾಲಕಾಲಕ್ಕೆ ತವರು ಮನೆಗೆ ಕರೆದುಕೊಂಡು ಬರುವುದು, ಅವರನ್ನು ಗಂಡನ ಮನೆಗೆ ಕಳುಹಿಸಿ ಕೊಡುವುದು. ಹೀಗೆ ಎಲ್ಲಾ ಜವಾಬ್ದಾರಿ ಅಣ್ಣನದೇ ಆಗಿರುತ್ತದೆ.

ಮದುವೆಯ ನಂತರ ಹೆರಿಗೆಗೆ ಎಂದು ಅಕ್ಕ ತಂಗಿಯರನ್ನು ತವರು ಮನೆಗೆ ಕರೆತರುವುದು. ಅಪ್ಪನ ಜತೆ ಅಣ್ಣ–ತಮ್ಮಂದಿರು ಅವಳ ಸಂಪೂರ್ಣ ಹೊಣೆಗಾರಿಕೆಯನ್ನು



ವಹಿಸಿಕೊಳ್ಳುತ್ತಿದ್ದವರು ಈ ಸಹೋದದರರೇ. ಈಗಿನಂತೆ ಆ ಸಮಯದಲ್ಲಿ ಹೆಚ್ಚಾಗಿ ಆಸ್ಪತ್ರೆಯಾಗಲಿ ಇರಲಿಲ್ಲ. ಹೆರಿಗೆ ಎಂದರೆ ಅದು ಅಮ್ಮನ ಮನೆಯಲ್ಲೇ. ಅದು ತವರು ಮನೆಯ ಕರ್ತವ್ಯ, ಹೆಣ್ಣು ಮಗಳ ಹಕ್ಕು ಎನ್ನುವಂತಿತ್ತು. ಒಂದು ರೀತಿಯಲ್ಲಿ ಈ ಬಸರಿಗೆ, ಬಾಣಂತಿಯರಿಗೆ ಸಂಪೂರ್ಣವಾದಂತಹ ವಿಶ್ರಾಂತಿ ಬೇಕಾಗುತಿತ್ತಲ್ಲ, ಅದಕ್ಕೆಲ್ಲಾ ತವರು ಮನೇನೇ ವಾಸಿ ಎನ್ನುವುದು ಲೋಕರೂಡಿ. ಕಾರಣ ಇಷ್ಟೆ ಅಂಥ ಸಂದರ್ಭಗಳಲ್ಲಿ ಅಣ್ಣ–ತಮ್ಮಂದಿರ ಸಹಕಾರ, ಪ್ರೀತಿ ಬೇಕಾಗುತ್ತಿತ್ತು, ಮೇಲಾಗಿ ತರುವುದಕ್ಕೆ ಬರುವುದಕ್ಕೆ ಮನೆಯಲ್ಲಿ ಜನರ ಅವಶ್ಯಕತೆ ಹೆಚ್ಚಾಗಿರುತಿತ್ತು.

ಹೀಗೆ ಪ್ರತಿಯೊಂದು ವಿಚಾರದಲ್ಲಿ ನಮಗೆ ಗೊತ್ತಿದ್ದಂತೆ, ಅಂದರೆ ಸಾಮಾನ್ಯವಾಗಿ ಚಿಕ್ಕಂದಿನಿಂದಲೇ ತಮ್ಮ ಅಥವಾ ತಂಗಿಯರನ್ನು ನೋಡ್ಕೊಳ್ಳೋದು ಅಣ್ಣಂದಿರ ಜವಾಬ್ದಾರಿ ಎಂಬ ಭಾವನೆಯನ್ನು ನಮ್ಮಲ್ಲಿ ಬೆಳಸುವುದೇ, ಮುಂದೆ ಒಳ್ಳೆಯ ಬಾಂಧವ್ಯಕ್ಕೆ ಕಾರಣವಾಗುತ್ತದೆ.

ಚಿಕ್ಕ ಮಕ್ಕಳಂತೂ ಇದಕ್ಕೆ ಜ್ವಲಂತ ಉದಾಹರಣೆ, ಶಾಲೆಗೆ ಹೋಗುವಾಗಲಂತೂ ಚಿಕ್ಕವರನ್ನು ರೆಡಿ ಮಾಡಿ ಜೊತೆಗೆ ಕೈ ಹಿಡಿದು ನೆಡೆಯುವುದು. ದಾರಿಯಲ್ಲಿ ಯಾರಾದ್ರೂ ತನ್ನ ತಮ್ಮನ/ತಂಗಿಯ ಬಗ್ಗೆ, ಅಥವಾ ಅಕ್ಕನ ಬಗ್ಗೆ ಕೆಟ್ಟದಾಗಿ ಮಾತಾಡಿದ್ರೆ ಕಂಡರೆ ಆ ಅಣ್ಣನಿಗೆ.ಅದೆಷ್ಟು ಸಿಟ್ಟು. ಅಣ್ಣನಿಗೆ ಯಾವತ್ತೂ ತನ್ನ ತಮ್ಮ ಅಕ್ಕ–ತಂಗಿಯರ ಬಗ್ಗೆ ಹೆಮ್ಮೆ. ಕೆಲವು ಬಾರಿ ದಿನವಿಡಿ ಎಷ್ಟೇ ಜಗಳವಾಡಿದ್ರೂ, ರಾತ್ರಿ ಮಲಗುವಾಗ ಅಕ್ಕನ ಅಥವಾ ಅಣ್ಣನ ಜೊತೆ ಹಾಡನ್ನೊ ಇಲ್ವೆ ಕಥೆಯನ್ನೊ ಕೇಳುತ್ತಾ ಅವರ ಪಕ್ಕದಲ್ಲೇ ಮಲಗಿಕೊಳ್ಳೊ ಆ ಸಂತೋಷ ಎಷ್ಟು ಹೇಳಿದರೂ ಕಡುಮಿಯೆ. ಏಕೆಂದರೆ ಅಣ್ಣನೊಂದಿಗೆ ಇದ್ದರೆ ಯಾವುದೇ ಭಯವಿಲ್ಲ.

ಅಕ್ಕ ತಂಗಿಯರ ಜೊತೆ ಎಷ್ಟೇ ಜಗಳವಾಡಿದರೂ, ಅಣ್ಣನಿಗೆ ಅವನ ಅಕ್ಕ ತಂಗಿಯರೆಂದರೆ ಹೆಮ್ಮೆ, ಅವಳಿಗೂ ಅಣ್ಣನೆಂದರೆ ಸಾಕ್ಷಾತ್ ಅಪ್ಪನಿದ್ದಂತೆ. ಅಕ್ಕ ತಂಗಿಯರು ಮನೆಯಿಂದ ಹೊರಟು ನಿಂತಾಗ ತನ್ನದೇನನ್ನೋ ಕಳೆದುಕೊಂಡಂತೆ ಒಳಗೊಳಗೆ ಕೊರಗುವವನೂ ಅಣ್ಣನೇ. ಅಣ್ಣನಿದ್ದಾನೆ ಎನ್ನುವ ಧೈರ್ಯವೇ, ಗಂಡನ ಮನೆಯಲ್ಲಿರುವ ತಂಗಿಗೆ ಆಸರೆ.

ಪ್ರತಿ ಬಾರಿ ಹಬ್ಬ ಹುಣ್ಣುಮೆಗೆ ಅಕ್ಕ ತಂಗಿಯರನ್ನು ತವರು ಮನೆಗೆ ಕರೆತಂದು ಅವಳ ಬಯಕೆಗಳನ್ನು ಪೂರೈಸುವವನೂ ಅವನೇ ಆಗಿರುತ್ತಾನೆ. ಹೌದು ಹೆಣ್ಣಿಗೆ ತವರು ಮನೆ ಅಪ್ಪ, ಅವಳ ಅಮ್ಮನೇ ಮುಖ್ಯ. ಅದರ ಜೊತೆ ಜೊತೆಗೆ ಅಷ್ಟೇ ಪ್ರೀತಿಸೋ ಅಣ್ಣ ತಮ್ಮಂದಿರೂ ಅವಳ ಪಾಲಿಗೆ ಬಹಳ ಮುಖ್ಯ.

ನಮಗೆಲ್ಲ ಗೊತ್ತಿರುವಂತೆ ಒಂದು ಹೆಣ್ಣು ಮಗಳಿಗೆ ಗಂಡನ ಮನೇಲಿ ಏನೆಲ್ಲಾ ಇರಲಿ, ಎಷ್ಟೇ ಸವಲತ್ತು, ಐಶ್ವರ್ಯ ಎಷ್ಟೇ ಪ್ರೀತಿ ತೋರಿಸಲಿ ಆದರೆ ತವರು ಮನೆಯ ಆ ಸಲುಗೆ ಅವಳು ಮನಬಿಚ್ಚಿ ಮಾತಾಡೋ ಆ ಮುಕ್ತ ವಾತಾವರಣ ಇದೆಯಲ್ಲ ಅದು ಮತ್ತೆಲ್ಲೂ ಅವಳಿಗೆ ಸಿಗುವುದಿಲ್ಲ.

ಏಕೆಂದರೆ ವಿಶೇಷವಾಗಿ ಅವಳ ಬಾಲ್ಯದ ನೆನಪುಗಳ ಗೂಡು ಈ ತವರು ಮನೆ. ಅಲ್ಲಿ ಬಂದಾಗ ಮಾತ್ರ ಅವಳು ಮತ್ತೆ ಮಗುವಿನಂಥಹ ನಿರಾಳತೆ. ಕಣ್ ತುಂಬಾ ನಿದ್ದೆ ಜೊತೆಗೆ, ಅಪ್ಪ–ಅಮ್ಮ, ಅಣ್ಣ–ತಮ್ಮಂದಿರ ಜೊತೆ ಇರುವ ಆ ಆನಂದ ಅವಳಿಗೆ ಯಾವತ್ತೂ ವಿಶೇಷವಾಗಿರುತ್ತದೆ.

ಇತ್ತೀಚಿನ ಈ ಪರಮಾಣು ಕೌಟಿಂಬಿಕ ವ್ಯವಸ್ಥೆಯಲ್ಲಿ ಒಂದೋ ಎರಡೋ ಮಕ್ಕಳಿರುವ ಈ ಸಮಯದಲ್ಲಿ ಈ ಮೇಲಿನ ಎಲ್ಲಾ ಅವಕಾಶಗಳನ್ನು ನಮ್ಮ ಮಕ್ಕಳು ಅದರಲ್ಲೂ ವಿಶೇಷವಾಗಿ ಹೆಣ್ಣು ಮಕ್ಕಳಿಗೆ, ಈ ಸಹೋದರರ ಸಂಬಂಧದ ಸದಾವಕಾಶದಿಂದ ವಂಚಿತರಾಗುತ್ತಿದ್ದಾರೆ.

ಇರುವ ತನಕ ಮನೆಯಲ್ಲಿ, ಮದುವೆಯ ನಂತರ ಅವಳ ತವರು ಮನೆಯಲ್ಲಿ ಈ ಸಹೋದರರಿದ್ದರೆ ಅವಳಿಗೆ ಹತ್ತಾನೆ ಬಲ ಬಂದಂತೆ. ಅವನೆಂದರೆ ಅವಳಿಗೆ ಏನೊ ಒಂದು ರೀತಿಯ ಹೆಮ್ಮೆ. ಇಂತಹ ಈ ಬಾಂಧವ್ಯ ಅವಳ ಬದುಕಿಗೆ ಬಹಳ ಮುಖ್ಯ. ಹೆಣ್ಣಿನ ಮನಸ್ಸು ಒಂದಲ್ಲ ಎರಡೂ ಮನೆಯಲ್ಲಿ ನಡೆಯುವ ಸಿಹಿ–ಕಹಿ ಘಟನೆಗಳೆರಡರ ಮಧ್ಯೆಯೂ ಸಂತೋಷ, ದುಃಖಗಳ ಅನುಭವ ಪಡೆಯುತ್ತಾಳೆ. ಅವಳಿಗೆ ಅವಳ ತವರು ಮನೆ, ಮನೆಯವರ ಸಾಧನೆ, ಕೀರ್ತಿಯ ಬಗ್ಗೆ ಉಬ್ಬಿ ಹೋಗುತ್ತಾಳೆ. ಅದೇ ಸಮಯದಲ್ಲಿ ಅಲ್ಲಿ ನೆದೆಯುವ ಯಾವುದೇ ಅಶುಭ ಸಮಾಚಾರ, ದುರಂತ, ಸೋಲುಗಳಿಗೆ ಕುಗ್ಗಿ ಹೋಗುತ್ತಾಳೆ.

ಹೆಣ್ಣಿನ ಬದುಕಿನ ಬೆಳಕು ಇದ್ದಂತೆ ಈ ಸೋದರ ಪ್ರೇಮ, ಹೆಣ್ಣಿನ ಬದುಕಿಗೆ ಇಂಥಾ ಅಣ್ಣ–ತಮ್ಮಂದಿರು ಬೇಕು. ಆಗ ಅವಳ ಬದುಕು ಹಗುರ, ನಿರಾಳವೆನಿಸುತ್ತದೆ.ತಂದೆಯ ನಂತರ ಅಣ್ಣನೇ ತಂದೆ ಸ್ಥಾನ ತುಂಬುವವನು. ಉಳಿದವರ ಸುಖ–ಕಷ್ಟ ವಿಚಾರಿಸುವವನು,

ಆದರೆ ಇಂದಿನ ಈ ನಮ್ಮ ವ್ಯವಸ್ಥೆಯಲ್ಲಿ ಇಂತಹ ಬಾಗ್ಯ ಕಣ್ಮರೆಯಾಗುತ್ತಿದೆ. ಕಾಲದ ಓಟದಲ್ಲಿ, ವ್ಯವಹಾರಗಳ ಭರಾಟೆಯಲ್ಲಿ, ಎಲ್ಲದನ್ನೂ ಹಣ ಆಸ್ತಿಯ ರೂಪದಲ್ಲೆ ನೋಡುತ್ತಿರುವಾಗ ಇನ್ನೆಲ್ಲಿ ಅಂತಹ ಪ್ರೀತಿ ಪ್ರೇಮ ಉಳಿಯಲು ಸಾಧ್ಯ. ಈ ಭಾಗ್ಯ ಎಲ್ಲ ಹೆಣ್ಣು ಮಕ್ಕಳಿಗೂ ಸಿಗುವಂತಾಗಲಿ. ಎಷ್ಟೇ ಶ್ರೀಮಂತಿಕೆ ಬಡತನಗಳಿದ್ದರೂ ಅಣ್ಣನೊಬ್ಬ ಇದ್ದಾನೆಂಬ ಭರವಸೆ ಹೆಣ್ಣಿನ ಬದುಕಿಗೆ ಬೆಳಕು ಇದ್ದಂತೆ, ಅಣ್ಣ ಎನ್ನುವುದಕ್ಕೆ ಪರ್ಯಾಯ ಪದ ಸಿಗದು. ಅವನು ಆತ್ಮ ಬಂದು. ಅವಳ ಪಾಲಿಗೆ ಅಪ್ಪನಂತಹ ಮನಸ್ಸುನ ಹಸು ಅವನು. ಏಕೋ ಇಂದು ಅಣ್ಣನ ನೆನದ ಅವಳ ಕಣ್ಣುಗಳ ಹೊಳಪನ್ನು ಕಂಡಾಗ...... ಬರೆಯಿಸಿಕೊಂಡಿದ್ದು.




**ಹಗರಿಬೊಮ್ಮನಹಳ್ಳಿ ಪುರಸಭಾ ಕಛೇರಿಯಲ್ಲಿ ಹಸಿರು ಕ್ರಾಂತಿಯ ಹರಿಕಾರರಾದ ಡಾ. ಬಾಬು ಜಗಜೀವನ್ ರಾಮ್ ಜಯಂತಿಯನ್ನು ಶನಿವಾರ ಆಚರಿಸಲಾಯಿತು. ಪುರಸಭಾ ಅಧ್ಯಕ್ಷ ಮರಿರಾಮಣ್ಣ, ಸದಸ್ಯರು, ಮುಖ್ಯಾಧಿಕಾರಿ ಪ್ರಭಾಕರ ಎಂ.ಪಾಟೀಲ, ಸಿಬ್ಬಂದಿವರ್ಗ ಇದ್ದರು.**

For Events Ads & News Coverage
Contact: M: 94486 33038
www.hampitimes.com /epaper.hampitimes.com

## ಮಹಿಳೆಯರಿಗೆ ಉಚಿತ ಅಣಬೆ ಬೇಸಾಯ ತರಬೇತಿ

■ ಹಂಪಿ ಟೈಮ್ಸ್ ಬಳ್ಳಾರಿ

ಮಹಿಳೆಯರು ಬಿಡುವಿನ ಸಮಯದಲ್ಲಿ ತಮ್ಮ ಮನೆಗಳಲ್ಲಿ ಅಣಬೆ ಬೇಸಾಯ ಮಾಡಬಹುದಾಗಿದ್ದು, ಇದರಿಂದ ತಮ್ಮ ಕುಟುಂಬ ನಿರ್ವಹಣೆಗೆ ಆರ್ಥಿಕ ವೃದ್ಧಿಯಾಗುವುದು ಎಂದು ಜಿಲ್ಲಾ ಪಂಚಾಯತ್‌ನ ಉಪಕಾರ್ಯದರ್ಶಿ ಗಿರಿಜಾ ಶಂಕರ್ ಹೇಳಿದರು.

ಶನಿವಾರ, ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯ ಆವರಣದಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ ರಚಿಸಿರುವ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ ಮಹಿಳೆಯರಿಗೆ ಆಯೋಜಿಸಿದ್ದ 10 ದಿನಗಳ ಉಚಿತ ಅಣಬೆ ಬೇಸಾಯ ತರಬೇತಿ ಕಾರ್ಯಗಾರ ಉದ್ಘಾಟಿಸಿ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ, ಯೋಜನಾ ನಿರ್ದೇಶಕ ವಿನೋದ್, ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕ ರಾಜೆಸಾಬ್ ಎಚ್.ಎರಿಮನಿ, ಸೇರಿದಂತೆ ಶಿಭಿರಾರ್ಥಿಗಳು ಭಾಗವಹಿಸಿದ್ದರು.

## ಡಾ|| ಬಾಬು ಜಗಜೀವನರಾಂ ರ ಜಯಂತಿ



■ ಹಂಪಿ ಟೈಮ್ಸ್ ಕೊಟ್ಟೂರು

ಕೊಟ್ಟೂರು ತಾಲೂಕ ಕಛೇರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ಶನಿವಾರ ಭಾರತದ ಮಾಜಿ ಉಪಪ್ರಾಧಾನಿಗಳು, ಹಸಿರು ಕ್ರಾಂತಿಯ ಹರಿಕಾರರು ಡಾ|| ಬಾಬು ಜಗಜೀವನರಾಂ ರವರ 118ನೇ ಜಯಂತಿ ಆಚರಿಸಲಾಯಿತು.

ಡಾ|| ಬಾಬು ಜಗಜೀವನರಾಂ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರ ಆದರ್ಶಗಳು ಯುವ ಸಮುದಾಯಕ್ಕೆ ಮಾರ್ಗದರ್ಶನ ಎಂದು ತಹಶೀಲ್ದಾರರು ಅಮರೇಶ್ ಜಿ ಕೆ ಅಧ್ಯಕ್ಷೀಯ ನುಡಿಗಳನ್ನಾಡಿದರು.

ಡಿಎಸ್ಎಸ್ ಜಿಲ್ಲಾ ಮುಖಂಡರಾದ ತೆಗ್ಗಿನಕೇರಿ ಕೊಟ್ರೇಶ್, ಬದ್ದಿ ಮರಿಸ್ವಾಮಿ, ತಾಲೂಕು ಡಾ|| ಬಾಬು ಜಗಜೀವನರಾಂ ಸಂಘದ ಅಧ್ಯಕ್ಷರಾದ ಹನುಮಂತಪ್ಪ ವಕೀಲರು, ಪಟ್ಟಣ ಪಂಚಾಯಿತಿ ಉಪಾಧ್ಯಕ್ಷರಾದ ಜಿ ಸಿದ್ದಯ್ಯ ಮಾತನಾಡಿದರು. ಪಟ್ಟಣ ಪಂಚಾಯಿತಿ ಅಧ್ಯಕ್ಷರು ಬದ್ದಿ ರೇಖಾ ರಮೇಶ್ ,ತಾಪಂ ಇಒ ಡಾ|| ಬಿ ಆನಂದಕುಮಾರ್,ಪಪಂ ಮುಖ್ಯಾಧಿಕಾರಿ ನಸರುಲ್ಲಾ, ತಾಲೂಕು ಡಾ|| ಬಿ ಆರ್ ಅಂಬೇಡ್ಕರ್ ಸಂಘದ ಅಧ್ಯಕ್ಷರಾದ ಬಿ ದುರುಗಪ್ಪ, ಎಪಿಎಂಸಿ ಉಪಾಧ್ಯಕ್ಷ ಶಿವಣ್ಣ, ರೈತ ಮುಖಂಡರಾದ ಭರಮಣ್ಣ, ಜಯಪ್ರಕಾಶ್ ನಾಯ್ಕ, ಸಮುದಾಯ ಆರೋಗ್ಯ ಕೇಂದ್ರದ ಡಾ.ಬದ್ಯಾನಾಯ್ಕ, ಶಿಕ್ಷಣ ಇಲಾಖೆಯ ಸಿ.ಅಜ್ಜಪ್ಪ, ಬಿಸಿಎಂ ಹಾಸ್ಟೆಲ್ ವಾರ್ಡನ್ ಬಸವರಾಜ್, ವಾರ್ಡನ್ ವೀರೇಶ ತುಪ್ಪದ,ವಾರ್ಡನ್ ಸದಾನಂದಯ್ಯ,ವಿದ್ಯುತ್ ಇಲಾಖೆ ಜೆಇ ಚೇತನ್, ಹಾಲಸ್ವಾಮಿ ಕಂದಾಯ ನಿರೀಕ್ಷಕರು,ಉಪತಹಶೀಲ್ದಾರ್ ಅನ್ನದಾನೇಶ ಬಿ ಪತ್ತಾರ, ಸಂಘಟನೆಯ ವಿವಿಧ ಪದಾಧಿಕಾರಿಗಳು, ವಿವಿಧ ಇಲಾಖೆಯ ಸಿಬ್ಬಂದಿ, ಕಛೇರಿಯ ಸಿಬ್ಬಂದಿ ಹಾಜರಿದ್ದರು.ಸಿ.ಮ.ಗುರುಬಸವರಾಜ್ ನಿರೂಪಿಸಿದರು.

## ರಾಮನ ದಶಾವತಾರ ಹನುಮನ ಸಾಹಸ ಕೆತ್ತನೆ

**ಮೊದಲ ಪುಟದಿಂದ**

ವರ್ಷಗಳ ಹಿನ್ನೆಲೆಯ ಮರದಮುಟ್ಟುಗಳನ್ನು ಬಳಸಲಾಗಿದೆ.

**ಶ್ರೀಲಕ್ಷ್ಮೀನಾರಾಯಣಸ್ವಾಮಿ ರಥ :** ಶ್ರೀಲಕ್ಷ್ಮೀ ನಾರಾಯಣಸ್ವಾಮಿ ರಥವು 32 ಅಡಿ ಎತ್ತರ, ಭಾರ 68 ಟನ್ ಇದ್ದು, ಒಟ್ಟು 6 ಚಕ್ರಗಳನ್ನು ಹೊಂದಿದ್ದು, ಹೊರಗಡೆ ನಾಲ್ಕು, ಒಳಗೆ ಎರಡು ಚಕ್ರಗಳನ್ನು ಹೊಂದಲಾಗಿದೆ. ಹೊರಗಿನ ನಾಲ್ಕು ಚಕ್ರಗಳು ನೆಲದಿಂದ 9.3 ಅಡಿ ಎತ್ತರ, 12 ಇಂಚು ದಪ್ಪ ಇವೆ. ಎರಡು ರಥಗಳ ಭದ್ರತೆಯ ದೃಷ್ಟಿಯಿಂದ ಚಕ್ರಗಳಿಗೆ 3 ಇಂಚು ಅಗಲದ ಕಬ್ಬಿಣದ ಪಟ್ಟಿಯನ್ನು ಅಳವಡಿಸಲಾಗಿದ.

ಶ್ರೀ ಲಕ್ಷ್ಮೀನಾರಯಣಸ್ವಾಮಿ ರಥವು ಐದು ಹಂತಗಳಲ್ಲಿ ನಿರ್ಮಾಣವಾಗಿದ್ದು ಇದರಲ್ಲಿ ಒಂದು ಹಂತದಲ್ಲಿ ಒಂದೊಂದು ರೀತಿಯ ಕಲಾಕೆತ್ತನೆಗಳ ನಿರ್ಮಾಣ ವಾಗಿವೆ. ಆದರಲ್ಲಿ ದಶಾವತಾರಗಳು, ಕೃಷ್ಣನ ವಿವಿಧ ಲೀಲೆಗಳು, ಅನಂತಶಯನ, ರಾಮಸೀತೆ ಕಲ್ಯಾಣ, ಸಪ್ತಮಾತ್ರಿಕೆಯರು, ನವದುರ್ಗೆಯರು, ಅಷ್ಟಲಕ್ಷ್ಮಿಯರು, ನಾಟ್ಯಶಾಸ್ತ್ರಕ್ಕೆ ಸಂಬಂಧಿಸಿದ 42 ಭಂಗಿಗಳು, ರಥದ ಮುಂಭಾಗದಲ್ಲಿ ಐದು ಆನೆಗಳನ್ನು, 600ಕ್ಕೂ ಹೆಚ್ಚು ಗಂಟೆಗಳನ್ನು ಅಳವಡಿಸಲಾಗಿದೆ. ರಥದ ಮುಂಭಾಗದ ಚೌಕದಲ್ಲಿ ಮೂರುವರೆ ಅಡಿ ಎತ್ತರದ ಆಂಜನೇಯ ಮತ್ತು ಗರುಡನ ಮೂರ್ತಿಯನ್ನು ಅಳವಡಿಸಲಾಗಿದೆ.

ಮೇಲ್ಭಾಗದಲ್ಲಿ ಸಾಗವಾನಿ ಕಟ್ಟಿಗೆಯಿಂದ 8 ಕಂಬಗಳ ಸುಮಾರು 3.5 ಟನ್ ಭಾರದ ಮಂಟವನ್ನು ನಿರ್ಮಿಸಲಾಗಿದ್ದು, ಇದರಲ್ಲಿ ಅಷ್ಟದಿಕ್ಪಾಲಕರು, ನಾಲ್ಕು ಕ್ಷೇತ್ರಪಾಲರನ್ನು ಹೊಂದಿದೆ. ಮಂಟಪದ ಮೇಲೆ 9 ಅಡಿ, 7 ಅಡಿ, 5 ಅಡಿ ಈ ಮೂರು ಸೇರಿ 21 ಅಡಿಯ ಡುಬರಿಗಳನ್ನು ಅಳವಡಿಸಿದ್ದು, ಇವುಗಳಿಗೆ ಕೇಸರಿ, ಬಿಳಿ, ಕೆಂಪು ಬಣ್ಣದ ಬಟ್ಟೆಯಿಂದ

ಅಲಂಕರಿಸಲಾಗಿದೆ. ಅದರ ಮೇಲೆ 5 ಅಡಿ ಕಲಸ ಅಳವಡಿಸಿದೆ. ಈ ರಥವು ನೆಲದಿಂದ 32 ಅಡಿ ಎತ್ತರವನ್ನು ಹೊಂದಿದೆ.

ಹಿಂಬದಿಯ ಎರಡು ಚಕ್ರಗಳಿಗೆ ಬ್ರೇಕ್‌ಗಳನ್ನು ಅಳವಡಿಸಲಾಗಿದೆ. ಅಲ್ಲದೆ ಮುಂಭಾಗದಲ್ಲಿ ರಥ ಸುಗಮವಾಗಿ ಸಾಗಲು 40 ಡಿಗ್ರಿಯಲ್ಲಿ ತಿರುಗುವಂತೆ ಸ್ಟೇರಿಂಗ್ ಅಳವಡಿಸಲಾಗಿದೆ.

ರಥದ ಮುಂಭಾಗದ ಪೂರ್ವದಲ್ಲಿ ಶ್ರೀಲಕ್ಷ್ಮೀನಾರಾಯಣ ಸ್ವಾಮಿ, ಶ್ರೀದೇವಿ, ಭೂದೇವಿ, ಪಶ್ಚಮದಲ್ಲಿ ಶ್ರೀರಾಮ ಲಕ್ಷ್ಮಣ ಸೀತೆ ಆಂಜನೇಯ, ದಕ್ಷಿಣಕ್ಕೆ ಲಕ್ಷ್ಮೀನರಸಿಂಹ, ಉತ್ತರಕ್ಕೆ ವಿಠಲರುಕ್ಮಾಯಿ ಮೂರ್ತಿಗಳನ್ನು ಅಳವಡಿಸಲಾಗಿದೆ.

**ಶ್ರೀ ಆಂಜನೇಯಸ್ವಾಮಿರಥ :** ಶ್ರೀಆಂಜನೇಯಸ್ವಾಮಿ ರಥವನ್ನು ಚೌಕಕಾರದ ಮಾದರಿಯಲ್ಲಿ ದ್ವಾದಶ ಕೋನದಲ್ಲಿ ನಿರ್ಮಿಸಲಾಗಿದೆ. ಈ ರಥವು 16 ಕೋನಗಳನ್ನು ಹೊಂದಿದ್ದು, ರಥದ ಅಲಂಕಾರಕ್ಕೆ ಬೇಕಾಗುವ ಜ್ಞಾನಶಿಲ್ಪಗಳು, ಗಾರೆಶಿಲ್ಪಗಳ, ಪದ್ಮಗಳಿಂದ ಅಲಂಕರಿಸಲಾಗಿದೆ. 8 ಅಡಿ ಎತ್ತರದ 6 ಚಕ್ರಗಳು, ಹೊರಗಡೆ ನಾಲ್ಕು, ಒಳಗಡೆ ಎರಡು ಚಕ್ರಗಳನ್ನು ಹೊಂದಿದೆ. ಈ ರಥದ ಸುತ್ತಲೂ ಹನುಮನ ವೃತ್ತಾಂತ ಹೇಳುವ 44 ಚಿತ್ರಗಳನ್ನು ಕೆತ್ತಲಾಗಿದೆ. ಅದರಲ್ಲಿ ಅಂಜನಾದೇವಿ ತಪಸ್ಸಿನ ಚಿತ್ರ, ಹನುಮನು ಸೂರ್ಯ ನನ್ನು ನುಂಗುವ ಚಿತ್ರ, ಹನುಮನು ಸುಗ್ರೀವನನ್ನು ಭೇಟಿ ಮಾಡುವ ಚಿತ್ರ, ಶ್ರೀರಾಮನನ್ನು ಭೇಟಿ ಮಾಡುವ ಚಿತ್ರ, ಸೀತಾದೇವಿಗೆ ಮುದ್ರಿಕೆಯನ್ನು ನೀಡುವ ಚಿತ್ರ, ಲಂಕಾದಹನ ಚಿತ್ರ, ಹನುಮನು ಸಂಜೀವಿನಿ ಹೊತ್ತು ತರುವ ಚಿತ್ರ, ಶ್ರೀರಾಮನ ಪಟ್ಟಾಭಿಷೇಕ ಸಂದರ್ಭದಲ್ಲಿ ಹನುಮನು ಉಪಸ್ಥಿತಿ ಚಿತ್ರ ಸೇರಿದಂತೆ ರಾಮಾಯಣದಲ್ಲಿ ಚಿತ್ರಿಸಿರುವ ಅನೇಕ ಚಿತ್ರಗಳನ್ನು ಆಂಜನೇಯ ರಥದಲ್ಲಿ ಕಂಡು ಬರುತ್ತವೆ.

ಹನುಮನು ಶಿವನ ರೂಪವಾದ್ದರಿಂದ ಶಿವತಾಂಡವದ 36 ಚಿತ್ರಗಳನ್ನು ಕೆತ್ತಲಾಗಿದೆ. ವಾದಿರಾಜರು ವಿರಚಿತ ಯಂತ್ರೋಧಾರಕ ಚಕ್ರವನ್ನು ರಥದ ಮುಖಭಾಗದಲ್ಲಿ ಅಳವಡಿಸಲಾಗಿದೆ. ರಥಕ್ಕೆ ಚಾಲುಕ್ಯ ಶೈಲಿಯ 8 ಕಂಬಗಳ ಮಂಟಪ ನಿರ್ಮಿಸಲಾಗಿದ್ದು, ಮಂಟಪದ ಮೇಲೆ 9 ಅಡಿ, 7 ಅಡಿ, 5 ಅಡಿ ಈ ಮೂರು ಸೇರಿ 21 ಅಡಿಯ ಡುಬರಿಗಳನ್ನು ಅಳವಡಿಸಿದ್ದು, ಇವುಗಳಿಗೆ ಕೇಸರಿ, ಬಿಳಿ, ಕೆಂಪು ಬಣ್ಣದ ಬಟ್ಟೆಯಿಂದ ಅಲಂಕರಿಸಲಾಗಿದೆ. ಅದರ ಮೇಲೆ 5 ಅಡಿ ಕಳಸ ಅಳವಡಿಸಿದೆ. ಈ ರಥವು ನೆಲದಿಂದ 29 ಅಡಿ ಎತ್ತರವನ್ನು ಹೊಂದಿದೆ.

## ಏ.9 ರಿಂದ ಜಿಲ್ಲೆಯ ವಿವಿಧೆಡೆ ಲೋಕಾಯುಕ್ತ ಜನ ಸಂಪರ್ಕ ಸಭೆ

■ ಹಂಪಿ ಟೈಮ್ಸ್ ಹೊಸಪೇಟೆ

ಕರ್ನಾಟಕ ಲೋಕಾಯುಕ್ತ ಹೊಸಪೇಟೆ ಘಟಕದಿಂದ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಹಾಗೂ ಪೊಲೀಸ್ ನಿರೀಕ್ಷಕರ ನೇತೃತ್ವದಲ್ಲಿ ಏಪ್ರಿಲ್.09 ರಿಂದ ಜಿಲ್ಲೆಯ ವಿವಿಧೆಡೆ ಲೋಕಾಯುಕ್ತ ಜನ ಸಂಪರ್ಕ ಸಭೆ ನಡೆಯಲಿವೆ.

ಏಪ್ರಿಲ್.09 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ರ ವರೆಗೆ ಹಡಗಲಿ ತಾಲೂಕು ಕಚೇರಿ ಸಭಾಂಗಣದಲ್ಲಿ, ಏಪ್ರಿಲ್.16 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಹಗರಿಬೊಮ್ಮನಹಳ್ಳಿ ತಾಲೂಕು ಕಚೇರಿ ಸಭಾಂಗಣ, ಹಾಗೂ ಏಪ್ರಿಲ್.22 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಹೊಸಪೇಟೆ ತಾಲೂಕು ಕಚೇರಿ ಸಭಾಂಗಣದಲ್ಲಿ ಜನಸಂಪರ್ಕ ಸಭೆಗಳು ನಡೆಯಲಿದ್ದು, ಸಾರ್ವಜನಿಕರು ತಮ್ಮ ಕುಂದುಕೊರತೆಗಳು, ಅಹವಾಲುಗಳು ಹಾಗೂ ಸರ್ಕಾರಿ ಕೆಲಸಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಕಚೇರಿಗಳಲ್ಲಿ ಅನಗತ್ಯ ವಿಳಂಬ, ಕಿರುಕುಳ, ತೊಂದರೆ ಮತ್ತು ಅಧಿಕಾರಿ ಸಿಬ್ಬಂದಿಯ ದುರಾಡಳಿತಕ್ಕೆ ಸಂಬಂಧಿಸಿದ ದೂರುಗಳನ್ನು ಆಯಾ ತಾಲೂಕುಗಳಲ್ಲಿ ನಿಗಧಿತ ದಿನಾಂಕದಂದು ದ್ವಿಪ್ರತಿಯಲ್ಲಿ ದೂರು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಎಂದು ಕರ್ನಾಟಕ ಲೋಕಾಯುಕ್ತ ಹೊಸಪೇಟೆ ಘಟಕದ ಪೊಲೀಸ್ ಉಪಾಧೀಕ್ಷಕರು ತಿಳಿಸಿದ್ದಾರೆ.

ತನ್ನ ಕಡುವೈರಿಯಾಗಿದ್ದರು ಆತನ ಶಿವ ಭಕ್ತಿಗೆ ಮಾರುಹೋಗಿ ಆತನ ಅಂತಿಮ ಸಂಸ್ಕಾರದಲ್ಲೂ ಶ್ರೀರಾಮ ಭಾಗಿ

# ರಾಮನ ಅವತಾರ... ಸದ್ಗುಣಗಳ ಆಗರ

ಉತ್ತರ ಭಾರತದ ಸರಯೂ ನದಿ ತೀರದಲ್ಲಿರುವ ಅಯೋಧ್ಯಾನಗರಿಯನ್ನು ಆಳುತ್ತಿದ್ದ ದಶರಥ ಮಹಾರಾಜನ ಮೊದಲ ಪುತ್ರ ರಾಮ ತನ್ನ ಸೋದರರಾದ ಲಕ್ಷ್ಮಣ, ಭರತ ಮತ್ತು ಶತ್ರುಘ್ನರೊಂದಿಗೆ ವಶಿಷ್ಠಾಶ್ರಮದಲ್ಲಿ ವಿದ್ಯಾಭ್ಯಾಸ ಮುಗಿಸಿ ವಿಶ್ವಾಮಿತ್ರರ ಆಶಯದಂತೆ ತಂದೆಯ ಹೇಳಿಕೆಯ ಮೇರೆಗೆ ಅರಮನೆಯಿಂದ ಹೊರಟು ಹಲವಾರು ರಾಕ್ಷಸರನ್ನು ಕೊಂದು ಮಿಥಿಲಾ ನಗರಿಯನ್ನು ಆಳುತ್ತಿದ್ದ ಜನಕರಾಜನ ಮಗಳು ಭೂಮಿಸುತೆ ಸೀತಾದೇವಿಯ ಸ್ವಯಂವರದಲ್ಲಿ ಶಿವ ಧನಸ್ಸನ್ನು ಹೆದೆ ಏರಿಸುವ ಮೂಲಕ ಗೆದ್ದು ಆಕೆಯನ್ನು ವಿವಾಹವಾಗಿ ಅಯೋಧ್ಯೆಗೆ ವಾಪಸಾದನು. ಇನ್ನೇನು ಯುವರಾಜ ಪಟ್ಟಾಭಿಷೇಕಕ್ಕೆ ತಯಾರಾಗುವಾಗ ತಂದೆಯು ತನ್ನ ಚಿಕ್ಕಮ್ಮನಿಗೆ ಕೊಟ್ಟ ವಚನವನ್ನು ನಿಭಾಯಿಸಲು 14 ವರ್ಷ ವನವಾಸಕ್ಕೆ ಪತ್ನಿ ಸೀತಾದೇವಿ ಮತ್ತು ಸೋದರ ಲಕ್ಷ್ಮಣರೊಡನೆ ಹೊರಟು ನಿಂತನು.

ಕಾಡಿನಲ್ಲಿ ತನ್ನನ್ನು ಕಂಡು ಮೋಹಿಸಿದ ಶೂರ್ಪನಖಿಯನ್ನು ರಾಮನು ತಿರಸ್ಕರಿಸಿದನು. ಇದರಿಂದ ಅಪಮಾನಗೊಂಡ ಆಕೆ ರಾಮನನ್ನು ಹೀನಾಯ ವಾಗಿ ನಿಂದಿಸಿದಾಗ ಕೋಪಗೊಂಡ ಲಕ್ಷ್ಮಣನು ಶೂರ್ಪನಖಿಯ ಕಿವಿ ಮತ್ತು ಮೂಗನ್ನು ಕತ್ತರಿಸಿ ಆಕೆಯನ್ನು ವಿಕಾರಗೊಳಿಸಿದನು. ಶೂರ್ಪನಖಿ ತನ್ನ ಸಹೋದರ ರಾವಣನಲ್ಲಿ ರಾಮನ ಕುರಿತು ದೂರನ್ನು ನೀಡಿದಳು. ತನ್ನ ಸೋದರಿಗಾದ ಅವಮಾನದಿಂದ ಕೃದ್ಧನಾದ ರಾವಣನು ಸೀತೆಯನ್ನು ಅಪಹರಿಸಲು ಮಾರೀಚನೊಂದಿಗೆ ಹುನ್ನಾರ ನಡೆಸಿದನು.

ವನವಾಸದ ಸಮಯದಲ್ಲಿ ಚಿನ್ನದ ಜಿಂಕೆಯನ್ನು ಕಂಡು ಅದನ್ನು ಪಡೆಯುವ ಪತ್ನಿಯ ಬಯಕೆಯನ್ನು ಈಡೇರಿಸಲು ರಾಮನು ಮಾಯಾಮೃಗದ ಬೆಂಬತ್ತಿ ಹೋದನು. ಇದೇ ಸಮಯವನ್ನು ಸಾಧಿಸಿ ಸನ್ಯಾಸಿಯ ವೇಷದಲ್ಲಿ ಬಂದ ರಾವಣನಿಗೆ ಭಿಕ್ಷೆ ನೀಡಲು ಉದ್ಯುಕ್ತಳಾಗಿ, ಪತಿಯನ್ನು ಅರಸಿ ಹೋದ ಮೈದುನ ಲಕ್ಷ್ಮಣನು ತನ್ನ ರಕ್ಷಣೆಗಾಗಿ ಹಾಕಿದ ಲಕ್ಷ್ಮಣ ರೇಖೆಯನ್ನು ದಾಟಿದಳು. ಲಕ್ಷ್ಮಣ ರೇಖೆಯನ್ನು ದಾಟಿ ಬಂದ ಸೀತೆಯನ್ನು ರಾವಣ ಅಪಹರಿಸಿಕೊಂಡು ಹೋಗುವಾಗ ಜಟಾಯು ಎಂಬ ಪಕ್ಷಿಯು ರಾವಣನನ್ನು ಎದುರಿಸಿ ಮೃತವಾಯಿತು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಪತ್ನಿಯನ್ನು ಕಳೆದುಕೊಂಡ ರಾಮನು ತನ್ನ ಸೋದರನೊಂದಿಗೆ ಆಕೆಯನ್ನು ಹುಡುಕುತ್ತಾ ಕಿಷ್ಕಿಂದೆಗೆ ಬಂದು ಋಷ್ಯಮೂಕ ಪರ್ವತದಲ್ಲಿದ್ದ ಸುಗ್ರೀವ ಮತ್ತಿತರ ವಾನರ ಪಡೆಯನ್ನು ಭೇಟಿಯಾದನು. ವಾಲಿಯನ್ನು ವಧಿಸಿ ಸುಗ್ರೀವನಿಗೆ ಆತನ ರಾಜ್ಯವನ್ನು ಮರಳಿಸಿದ ರಾಮನು ವಾನರ ವೀರ ಆಂಜನೇಯನನ್ನು ಸ್ವರ್ಣ ಲಂಕೆಗೆ ದೂತನಾಗಿ ಕಳುಹಿಸಿದನು. ಅಗಾಧ ಸಮುದ್ರವನ್ನು ಒಂದೇ ಏಟಿಗೆ ಹಾರಿ ದಾಟಿದ ಹನುಮನು ಸ್ವರ್ಣಲಂಕೆಯ ಅಶೋಕವನದಲ್ಲಿ ಸೀತೆಯನ್ನು ಭೇಟಿಯಾಗಿ ರಾಮನ ಸಂದೇಶವನ್ನು ಆಕೆಗೆ ನೀಡಿದನು. ಮರಳಿ ರಾಮನ ಬಳಿ ಬಂದ ಹನುಮನು ಸೀತೆಯ ಚೂಡಾಮಣಿ ಯನ್ನು ರಾಮನಿಗೆ ನೀಡಿ ರಾವಣನ ಸ್ವರ್ಣಲಂಕೆಯಲ್ಲಿ ಆಕೆಯ ಇರುವನ್ನು ದೃಢೀಕರಿಸಿದನು.

ವಾನರಸೇನೆ ನಿರ್ಮಿಸಿದ ಸೇತುಬಂಧದ ಮೂಲಕ ಸಮುದ್ರ ದಾಟಿದ ರಾಮನು ರಾವಣನೊಂದಿಗೆ ನಡೆದ ಭೀಕರ ಯುದ್ಧದಲ್ಲಿ ರಾವಣನ ಸೋದರ ಕುಂಭಕರ್ಣನು



ಸಾವಿಗೀಡಾದನು.ರಾವಣನ ಮಗ ಇಂದ್ರಜಿತುವಿನ ಕೈಯಲ್ಲಿ ಲಕ್ಷ್ಮಣನು ಗಾಯಗೊಂಡು ಮೂರ್ಚಿತನಾದಾಗ ವೈದ್ಯರ ಸಲಹೆಯಂತೆ ಹನುಮನು ಸಂಜೀವಿನಿ ಮೂಲಿಕೆ ಇರುವ ಪರ್ವತವನ್ನು ಹೊತ್ತು ತಂದನು. ಮುಂದೆ ರಾಮ ರಾವಣರ ನಡುವೆ ನಡೆದ ಭೀಕರ ಯುದ್ಧದಲ್ಲಿ ರಾಮನು ರಾವಣನನ್ನು ವಧಿಸಿ ಜಯ ಗಳಿಸಿದನು. ತಾನು ಗಳಿಸಿದ ಸ್ವರ್ಣ ಲಂಕೆಯನ್ನು ರಾವಣನ ಸೋದರ ವಿಭೀಷಣನಿಗೆ ಪಟ್ಟಗಟ್ಟಿದನು.

ತನ್ನ ಪಾತಿವ್ರತ್ಯವನ್ನು ಯಾರೂ ಶಂಕಿಸಬಾರದೆಂದು ಅಗ್ನಿ ಪ್ರವೇಶ ಮಾಡಿದ ಸೀತೆ ಪುನೀತಳೆಂದು ಕರೆಯಲ್ಪಟ್ಟಳು. ಮುಂದೆ ರಾಮನು ಅಯೋಧ್ಯೆಗೆ ಮರಳಿ ತನ್ನ ತಾಯಂದಿರ,ಸೋದರ ಭರತನ ಮತ್ತು ಪುರ ಜನರ ಆಶಯದಂತೆ ಮಹಾರಾಜನಾಗಿ ಬಹಳಷ್ಟು ಕಾಲ ರಾಜ್ಯಭಾರ ಮಾಡಿದನು. ಇದು ನಾವು ನೀವೆಲ್ಲರೂ ಅರಿತ ರಾಮಾಯಣದ ಸಂಕ್ಷಿಪ್ತ ಕಥೆ.

ಇಷ್ಟೇ ಆದರೆ ರಾಮ ಓರ್ವ ರಾಜನೆಂದು ಪ್ರಸಿದ್ಧನಾಗುತ್ತಿದ್ದ ಮಾತ್ರ ಆದರೆ ರಾಮ ಆದರ್ಶ ವ್ಯಕ್ತಿ ಎನಿಸಿದ, ದೈವ ರೂಪವೆನಿಸಿದ ಮುಂದೆ ದೇವರೇ ಆದ.

* ರಾಮನು ಅಖಂಡ ಭೋಗ ಭಾಗ್ಯದಲ್ಲಿ ಇರುವ ವಯಸ್ಸಿನಲ್ಲಿ ಗುರುಹಿರಿಯರಿಗೆ ವಿಧೇಯನಾಗಿ ಗುರುಕುಲದ ನಿಯಮಗಳಿಗೆ ಬದ್ಧನಾಗಿ ತನ್ನ ಸೋದರರೊಂದಿಗೆ ಗುರುಕುಲದಲ್ಲಿ ಇದ್ದು ವಿದ್ಯೆ ಕಲಿತನು.

* ನವ ವಿವಾಹಿತನಾಗಿ ಅಯೋಧ್ಯೆಗೆ ಮರಳಿದ ರಾಮನು ತನ್ನ ಚಿಕ್ಕಮ್ಮನಿಗೆ ತಂದೆ ನೀಡಿದ ವಚನಕ್ಕೆ ಬದ್ಧನಾಗಿ ಅರಮನೆಯ ಭೋಗ ಭಾಗ್ಯಗಳನ್ನು ತ್ಯಜಿಸಿ ನಾರು ಮಡಿಯನ್ನುಟ್ಟು ಕಾಡಿಗೆ ತೆರಳಿ ಪರ್ಣಕುಟಿಯಲ್ಲಿ ವಾಸವಿದ್ದು ಗೆಡ್ಡೆ ಗಣಸುಗಳನ್ನು ತಿಂದು ಜೀವನ ನಡೆಸಿದನು.

* ತನ್ನ ವನವಾಸಕ್ಕೆ ಕಾರಣಳಾದ ತಾಯಿ ಕೈಕೇಯಿಯನ್ನು ದ್ವೇಷಿಸದೆ, ಆಕೆಯ ಪುತ್ರ ಭರತನು ರಾಜ್ಯಕ್ಕೆ ಮರಳುವಂತೆ ಮಾಡಿದ ಆಗ್ರಹಕ್ಕೂ ಬಗ್ಗದೆ ಕಾಡಿನಲ್ಲಿಯೇ ಉಳಿದುಕೊಂಡನು.

* ಧರ್ಮ ಕಾರ್ಯಗಳಿಗೆ ಯಾಗಾದಿಗಳಿಗೆ ಅಡ್ಡಿ ಮಾಡಿದ ರಾಕ್ಷಸರನ್ನು ಸದೆಬಡಿದನು. ತಾನು ವಿಷ್ಣುವಿನ ದಶಾವತಾರಗಳಲ್ಲಿ ಒಂದೆಂಬ ಅರಿವನ್ನು ಹೊಂದಿದ್ದರೂ ಕೂಡ ಎಂದು ತನ್ನ ದೈವತ್ವವನ್ನು ಮಾನವನಾದ ರಾಮನ ಮೇಲೆ ಹೇರಲಿಲ್ಲ. ಸದಾ ಧರ್ಮ ರಕ್ಷಕನಾಗಿ ಧರ್ಮ ಪಾಲಕನಾಗಿದ್ದನು.

* ಪತ್ನಿಯನ್ನು ಕಳೆದುಕೊಂಡಿದ್ದರೂ ಕೇವಲ ವಾನರ ಸೈನ್ಯದ ಸಹಾಯದಿಂದ ಯುದ್ಧ ಮಾಡಿ ಗೆದ್ದನು. ರಾಕ್ಷಸೇಂದ್ರನಾದ ರಾವಣನು ತನ್ನ ಕಡುವೈರಿಯಾಗಿದ್ದರು ಆತನ ಶಿವ ಭಕ್ತಿಗೆ ಮಾರುಹೋಗಿದ್ದ ರಾಮನು ಆತನ ಅಂತಿಮ ಸಂಸ್ಕಾರದಲ್ಲಿ ಭಾಗಿಯಾಗಿದ್ದನು.

* ಇಂದ್ರನ ಅಮರಾವತಿಯನ್ನು ನಾಚಿಸುವಂತಹ ಸ್ವರ್ಣ ಲಂಕೆಯನ್ನು ಗೆದ್ದರೂ ರಾವಣನ ಸಹೋದರ ವಿಭೀಷಣನಿಗೆ ಲಂಕೆಯ ರಾಜನಾಗಿ ಪಟ್ಟಾಭಿಷೇಕ ಮಾಡಿದನು.

* ಪುರ ಜನರ ಮಾತುಗಳಿಗೆ ಪತ್ನಿ ಸೀತಾದೇವಿ ಬಲಿಯಾಗಬಾರದೆಂದು ಆಕೆಯ ಅಗ್ನಿ ಪ್ರವೇಶಕ್ಕೆ ಮೌನ ಸಮ್ಮತಿಯನ್ನು ನೀಡಿದನು. *ಮರಳಿ ಅಯೋಧ್ಯೆಗೆ ಬಂದ ನಂತರ ತನ್ನ ತಾಯಿ ಕೌಸಲ್ಯಗೆ ನೀಡಿದಷ್ಟೇ ಗೌರವವನ್ನು ಉಳಿದಿಬ್ಬರು ತಾಯಂದಿರಾದ ಸುಮಿತ್ರ ಮತ್ತು ಕೈಕೆಯರಿಗೆ ನೀಡಿದನಲ್ಲದೆ, ಕೈಕೆಯಿಯು ತನ್ನ ಆಕೃತ್ಯಕ್ಕಾಗಿ ಸದಾ ಮರುಗದಿರುವಂತೆ ಕೇಳಿಕೊಂಡನು.

ಇತಿಹಾಸದ ಪ್ರಕಾರ ಸುಮಾರು 1000 ವರ್ಷ ರಾಮನು ರಾಜ್ಯವಾಳಿದನು ಎಂದು ಹೇಳುತ್ತಾರೆ. ಈ ಸಮಯ ಭಾರತ ದೇಶದ ಉತ್ತರ ಭಾಗದ ಅಯೋಧ್ಯೆ ರಾಮ ರಾಜ್ಯವಾಗಿತ್ತು. ಸುಖ ಶಾಂತಿ ನೆಮ್ಮದಿ ಸಮೃದ್ಧಿ ಎಲ್ಲವೂ ನೆಲೆಸಿತ್ತು. ಭವ ಬಂಧನದಲ್ಲಿ ಇದ್ದುಕೊಂಡೆ ಶ್ರೀರಾಮನು ಸದ್ಗುಣಗಳ ಆಗರವಾಗಿ, ಪಿತೃವಾಕ್ಯ ಪರಿಪಾಲಕನಾಗಿ, ಒಳ್ಳೆಯ ಸಹೋದರನಾಗಿ ಮರ್ಯಾದಾ ಪುರುಷನಾಗಿ, ಏಕ ಪತ್ನಿ ವ್ರತಸ್ಥನಾಗಿ, ದಕ್ಷ ರಾಜನಾಗಿ ಬಾಳಿ ಬದುಕಿದ. ಅಂತೆಯೇ ಇತಿಹಾಸದಲ್ಲಿ ಆತ ಅಜರಾಮರನಾದ, ಮಾನವತೆಯಿಂದ ದೇವತ್ವದೆಡೆಗೆ ನಡೆದ.... ಕೊನೆಗೆ ಪ್ರಭು ಶ್ರೀರಾಮ ದೇವರೇ ಆದನು. ಅಂತೆಯೇ ಪ್ರಭು ಶ್ರೀ ರಾಮನು ಹುಟ್ಟಿದ ಚೈತ್ರ ಮಾಸದ ನವಮಿ ತಿಥಿಯನ್ನು ರಾಮನವಮಿ ಎಂದು ದೇಶದೆಲ್ಲೆಡೆ ಸಂತಸ ಸಡಗರದಿಂದ ಆಚರಿಸುತ್ತಾರೆ. ಎಲ್ಲರೂ ಪ್ರಭು ಶ್ರೀರಾಮನ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಯುವ ಪೀಳಿಗೆಗೆ ಹರಸುತ್ತಾ..... ಎಲ್ಲರಿಗೂ ಶ್ರೀ ರಾಮನವಮಿಯ ಶುಭಾಶಯಗಳು.

# ಶೋಷಿತರ ಶ್ರೇಯೋಭಿವೃದ್ಧಿಗೆ ದುಡಿದಿದ್ದಾರೆ ಬಾಬೂಜಿ

## ಶಾಸಕ ಹೆಚ್.ಆರ್.ಗವಿಯಪ್ಪ ಹೇಳಿಕೆ | ಬಾಬೂಜೀ ಪುತ್ಥಳಿಗೆ ಮಾಲಾರ್ಪಣೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಮಾಜಿ ಉಪ ಪ್ರಧಾನಿ ಹಾಗೂ ಹಸಿರು ಕ್ರಾಂತಿಯ ಹರಿಕಾರ ಬಾಬು ಜಗಜೀವನರಾಂ ಅವರು ಸಮಸಮಾಜದ ನಿರ್ಮಾಣ ಮತ್ತು ಶೋಷಿತರ ಹಕ್ಕುಗಳಿಗೆ ಹೋರಾಡಿದ ಧೀಮಂತ ವ್ಯಕ್ತಿ ಎಂದು ಹೊಸಪೇಟೆ ಶಾಸಕ ಹೆಚ್.ಆರ್. ಗವಿಯಪ್ಪ ಹೇಳಿದರು.

ನಗರದ ಬಾಬು ಜಗಜೀವನರಾಂ ಅವರ 118 ನೇ ಜನ್ಮ ದಿನಾಚರಣೆ ನಿಮಿತ್ತ ಹುಡಾ ಕಚೇರಿ ಬಳಿಯಿರುವ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಶನಿವಾರ ಮಾತನಾಡಿದರು,

ಬಾಬೂಜಿ ಸಾಮಾಜಿಕ ಹೋರಾಟಗಳ ಮೂಲಕ ರಾಜಕೀಯ ಪ್ರವೇಶಿಸಿದವರು. ಶೋಷಿತ ಸಮುದಾಯದ ಮತದಾನದ ಹಕ್ಕುಗಳು, ಸಮಾನ ಅವಕಾಶಗಳಿಗಾಗಿ ದಲಿತ ಸಮುದಾಯದ ಪ್ರತಿನಿಧಿಯಾಗಿ ದುಡಿದಿದ್ದಾರೆ. ದೇಶದ ಕಾರ್ಮಿಕ ಕಾಯ್ದೆಗಳನ್ನು ರೂಪಿಸಿ ಜಾರಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಜಾತಿ ವರ್ಗರಹಿತ ಸಮಸಮಾಜ ಕನಸು ಕಂಡಿದ್ದರು. ಭಾರತದ ಸಾಮಾಜಿಕ ಅಸ್ಥಿರತೆ, ಸ್ವಾತಂತ್ರ್ಯ ಚಳುವಳಿ ಅವರನ್ನು ಹೋರಾಟಕ್ಕೆ ಸ್ಫೂರ್ತಿ ನೀಡಿವೆ. ಅವರ ತತ್ವಾದರ್ಶಗಳನ್ನು ಇಂದಿನ ಯುವ ಪೀಳಿಗೆ ಅಳವಡಿಸಿಕೊಳ್ಳಬೇಕಿದೆ ಎಂದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಅವರು ಪುತ್ಥಳಿಗೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು. ಬಾಬೂಜಿಯವರು ಕೃಷಿ ಸಚಿವರಾಗಿದ್ದ ವೇಳೆಯಲ್ಲಿ ಭಾರತ ಭೀಕರ ಬರಗಾಲಕ್ಕೆ ತುತ್ತಾದಾಗ ಅಹಾರದ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸಲು ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಹಸಿರು ಕ್ರಾಂತಿ ಹರಿಕಾರ ಎಂದು ಕರೆಸಿಕೊಂಡವರು. ಕೃಷಿ–ಕೈಗಾರಿಕಾ ಕಾರ್ಮಿಕರು, ದಮನಿತ ವರ್ಗಗಳ ಹಿತರಕ್ಷಣೆಗಾಗಿ ಖೇತಿಹಾರ ಮಜ್ದೂರು ಸಭಾ ಮತ್ತು ಅಖಿಲ ಭಾರತ ಶೋಷಿತ ವರ್ಗಗಳ ಒಕ್ಕೂಟ ಸ್ಥಾಪಿಸಿ ಹೋರಾಟಕ್ಕೆ ಜನರನ್ನು ಪ್ರೇರಿಪಿಸಿದ್ದರು. ದೇಶದ ಜನತೆಗೆ ಅವಿಸ್ಮರಣೀಯ ವ್ಯಕ್ತಿತ್ವ ಇವರದ್ದಾಗಿದೆ ಎಂದರು.

ಈ ಕಾರ್ಯಕ್ರಮದಲ್ಲಿ ಹುಡಾ ಅಧ್ಯಕ್ಷ ಹೆಚ್.ಎನ್.ಎಫ್ ಇಮಾಮ್ ನಿಯಾಜಿ, ಸಹಾಯಕ ಆಯುಕ್ತ ವಿವೇಕಾನಂದ, ಜಿಪಂ ಉಪ ಕಾರ್ಯದರ್ಶಿ ಭೀಮಪ್ಪ ಲಾಳಿ, ಮಹಿಳಾ ಮತ್ತು ಮಕ್ಕಳು ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಶ್ವೇತಾ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಹೆಚ್.ವಿ. ಮಂಜುನಾಥ್, ತಹಸೀಲ್ದಾರ ಎಂ.ಶೃತಿ, ಆರ್‌ಸಿಹೆಚ್ ಅಧಿಕಾರಿ ಡಾ.ಜಂಬಯ್ಯ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ ದೊಡ್ಡಮನಿ, ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು. ಇದೇ ವೇಳೆ ತಾಲೂಕು ಡಾ.ಬಿ.ಆರ್. ಅಂಬೇಡ್ಕರ್ ಅಟೋ ಚಾಲಕರ ಸಂಘದಿಂದ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಾಬು ಜಗಜೀನ್ ರಾಮ್ ಅವರ ಭಾವಚಿತ್ರಗಳನ್ನು ಆಟೋದಲ್ಲಿ ಮೆರವಣಿಗೆ ನಡೆಸಲಾಯಿತು.

# ಬಾಬೂಜಿಯವರ ಆದರ್ಶ ಅಳವಡಿಸಿಕೊಂಡು ನಡೆಯಬೇಕು



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಸ್ವಾತಂತ್ರ್ಯ ಹೋರಾಟಗಾರ, ದೇಶದ ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ ರಾಮ್ ಅವರು ತಮ್ಮ ಬದುಕಿನುದ್ದಕ್ಕೂ ಎಲ್ಲಾ ಕ್ಷೇತ್ರಗಳಿಗೆ ಅಪಾರ ಕೊಡುಗೆ ನೀಡಿದ ಮಹಾನ್ ನಾಯಕ, ಅವರ ತತ್ವಗಳನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದು ತಹಶೀಲ್ದಾರ್ ವಿ.ಕೆ ನೇತ್ರಾವತಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಡಾ.ಬಾಬು ಜಗಜೀವನ ರಾಮ್ ಅವರ 118ನೇ ಜಯಂತ್ಯುತ್ಸವದಲ್ಲಿ ಮಾತನಾಡಿದ ಅವರು, ಎಲ್ಲಾ ಜಯಂತಿಗಳ ಆಚರಣೆಯ ಉದ್ದೇಶ ಸಾಂಕೇತಿಕ ಆಚರಣೆ ಆಗದೇ ಮಹನೀಯರ ಆದರ್ಶಗಳನ್ನು ಪಾಲನೆ ಮಾಡಬೇಕು. ಲೀಡರ್ ಅಂದರೆ ತಾನು ಬೆಳೆಯುವುದಲ್ಲ ಹಿಂದೆ ಇರೋರನ್ನು ಬೆಳೆಸಬೇಕು ಆದರೆ ಅವರು ತಮ್ಮ ಹಿಂದೆ ಇರುವ ಜನರನ್ನು ಮುಂದೆ ಬರಲಿ ಎಂದು ಹೋರಾಟ ಮಾಡಿದ್ದಾರೆ. ಹಾಗಾಗಿ ನಾವುಗಳು ಅವರನ್ನು ಪೂಜೆ ಮಾಡುತಿದ್ದೇವೆ. ಸಾಮಾಜಿಕ ಸುಧಾರಣೆ, ಹಸಿರು ಕ್ರಾಂತಿ ಅಲ್ಲದೇ ಇನ್ನೂ ಹಲವಾರು ಕ್ಷೇತ್ರಗಳ ಅಭಿವೃದ್ಧಿಯಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ ಎಂದು ಹೇಳಿದರು.

ಈ ವೇಳೆ ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಎಸ್ ದುರುಗೇಶ್ ಮಾತನಾಡಿದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯಿತಿ ಅಧ್ಯಕ್ಷ ಕಾವಲಿ ಶಿವಪ್ಪ ನಾಯಕ, ಅಧಿಕಾರಿಗಳಾದ ಶಾಹೇಖಾ ಅಹ್ಮದಿ, ಎಸ್ ವೇಂಕಟೇಶ್, ಪಿಎಸ್‌ಐ ಪ್ರಕಾಶ್, ಮುಖಂಡರಾದ ಕೃಷ್ಣಪ್ಪ ಗುಣಸಾಗರ, ಸಾಸಲವಡ ಶಿವಣ್ಣ, ಸೇರಿದಂಥೆ ಇತರರು ಇದ್ದರು.

## ನನ್ನ ಗುರಿ



ವಿದ್ಯಾರ್ಥಿಗಳಿಗಾಗಿ ಲೇಖನ ಸ್ಪರ್ಧೆ
(ಪ್ರೌಢಶಾಲಾ ಹಾಗೂ ಕಾಲೇಜ್ ವಿದ್ಯಾರ್ಥಿಗಳಿಗಾಗಿ)
ನಿಮ್ಮ ಪ್ರತಿಭೆ ಹೊರಹಾಕಲು ನಿಮಗೊಂದು ಸುವರ್ಣಾವಕಾಶ !

ಪ್ರಿಯ ವಿದ್ಯಾರ್ಥಿಗಳೆ,



ನಮಗೆ ಪ್ರತಿಯೊಬ್ಬರಿಗೂ ಗುರಿ ಜೊತೆ ಕನಸುಗಳಿರುತ್ತವೆ! ನೀವೂ ಭವಿಷ್ಯದಲ್ಲಿ ಏನಾದರೂ ಆಗಬೇಕೆಂದುಕೊಳ್ಳುತ್ತೀರಿ, ಅಲ್ಲವೆ? ವೈದ್ಯ, ವಿಜ್ಞಾನಿ,ಇಂಜಿನಿಯರ್, ಕ್ರೀಡಾಪಟು, ಕಲಾವಿದ, ಶಿಕ್ಷಕ, ಅಥವಾ ಇತರ ಹೊಸ ಕ್ಷೇತ್ರಗಳಲ್ಲಿ ನಿಮ್ಮ ಹೆಜ್ಜೆ ಗುರುತನ್ನು ಮೂಡಿಸಲು ನೀವು ಬಯಸಬಹುದು.
ಈ ಕನಸುಗಳನ್ನು ಬರಹ ರೂಪದಲ್ಲಿ ಹಂಚಿಕೊಳ್ಳಲು ನಿಮಗೆ ಒಂದು ಅವಕಾಶ!

ಹಂಪಿ ಟೈಮ್ಸ್ ಈಗಾಗಲೇ ಸ್ಟುಡೆಂಟ್ ಕಾಲಂ ಮೂಲಕ ಮಕ್ಕಳಲ್ಲಿ ಕತೆ ಬರೆಯುವ ಕೌಶಲ್ಯ ಮೂಡಿಸುತ್ತಿದೆ. ಬೇಸಿಗೆ ರಜೆಯ ನಿಮಿತ್ತ "ನನ್ನ ಗುರಿ" ಶೀರ್ಷಿಕೆಯಡಿ ಲೇಖನ ಸ್ಪರ್ಧೆಯಲ್ಲಿ ಪಾಲ್ಗೊಳ್ಳಿ!

200 ಪದಗಳಿಗೆ ಮೀರದಂತೆ ಲೇಖನ ಬರೆಯಿರಿ.



ನಿಮ್ಮ ಗುರಿ/ಕನಸು ಏನು? ಅದನ್ನು ಸಾಧಿಸಲು ನೀವು ಏನನ್ನು ಮಾಡಲಿದ್ದೀರಿ? ನಿಮ್ಮ ಆಯ್ಕೆಗೆ ಪ್ರೇರಣೆಯಾರು? ಮತ್ತು ನೀವು ಅಂದುಕೊಂಡ ಗುರಿ ಸಾಧಿಸಲು ನೀವು ತೆಗೆದುಕೊಳ್ಳಬಹುದಾದ ಅವಧಿಯನ್ನೂ ನಮೂದಿಸಿ ನಿಮ್ಮ ಭಾವಚಿತ್ರ, ಸಂಪರ್ಕ ನಂಬರಿನೊಂದಿಗೆ ಬರೆದು ಕಳಿಸಿರಿ.

ಆಯ್ದ ಲೇಖನಗಳನ್ನು "ಹಂಪಿ ಟೈಮ್ಸ್" ನಲ್ಲಿ ಪ್ರಕಟಿಸಲಾಗುವುದು!
ನಿಮ್ಮ ಲೇಖನಗಳನ್ನು ನುಡಿ/ಯುನಿಕೋಡ್‌ನಲ್ಲಿ ಟೈಪ್ ಮಾಡಿ, ಇ-ಮೇಲ್: hampitimes@gmail.com ಗೆ ಕಳಿಸಿ.

ನಿಮ್ಮ ಕನಸುಗಳನ್ನು ಹಂಚಿಕೊಳ್ಳಲು ತಯಾರಾಗಿದ್ದೀರಾ? ಬರೆಯಲು ಶುರುಮಾಡಿ!

94486 33038 www.hampitimes.com / epaper.hampitimes.com hampitimes@gmail.com